॥ಶ್ರೀ ಸದ್ಗುರವೇ ನಮಃ॥

ಆರ್ಯಸಂಸ್ಕೃತಿ

"ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು"

ಅಷ್ಟಾಂಗಯೋಗವಿಜ್ಞಾನಮಂದಿರಂ

೯೫೭, ಶೇಷಾದ್ರಿ ಅಯ್ಯರ್ ರಸ್ತೆ,

ಲಕ್ಷ್ಮೀಪುರಂ, ಮೈಸೂರು . ೫೭೦ ೦೦೪

ಸಂಪುಟ ೩ ದುರ್ಮತಿ – ಆಷಾಢ – ಜುಲೈ -೧೯೮೧ ಸಂಚಿಕೆ ೯

ಬೆಲೆ–ಬಿಡಿ ಪ್ರತಿ ೧ ರೂಪಾಯಿ

ವಿಷಯಸೂಚೀ : ಪುಟ

ಶ್ರೀ ಸದ್ಗುರವೇ ನಮಃ

(ವಿಜ್ಞಾನವಾಣೀವೀಣಾವಾದನವಿಯದ್ವ್ಯಾಹಿಸಿಯು ವಿಶ್ವದಲ್ಲೆಲ್ಲಾ ವ್ಯಾಪಿಸಿ ವಿರಾಜಿಸಲಿ)

ಆರ್ಯಸಂಸ್ಕೃತಿ

ಸನಾತನಾರ್ಯಭಾರತೀಯಮಹರ್ಷಿಗಳ ಸಂಸ್ಕೃತಿ ಮತ್ತು ನಾಗರಿಕತೆಗಳ ಒಳತತ್ತ್ವದ ಸಂಶೋಧನೆ ಮತ್ತು ಅಧ್ಯಯನಗಳಿಗೆ ಮೀಸಲಾದ ಮಾಸಪತ್ರಿಕೆ)

ಸಂಪುಟ ೩ ದುರ್ಮತಿ—ಆಷಾಢ—ಜುಲೈ ೧೯೬೧ ಸಂಚಿಕೆ ೯

ಶ್ರೀ ಗುರುವಾಣೀ

ಪ್ರಮೆ, ಮತ್ತು ಭ್ರಮೆ.

(ಹೆಡತಲೆಯಲ್ಲಿರುವ ಶ್ರೀ ಗುರುಗಳ ವಾಸಗೃಹದ ಪಕ್ಕದಲ್ಲಿರುವ ವಿಜ್ಞಾನ ಮಂದಿರದ ಕಾರ್ಯಾಲಯದಲ್ಲಿ ಬಂದ ಪ್ರಸಂಗವಿದು. ಈ ಪ್ರಸಂಗ ಬಂದುದು ತಾ 5-10-61 ರಲ್ಲಿ ಮಧ್ಯಾಹ್ನ 4-50ರ ಸಮಯ. ಈ ವಿಷಯವನ್ನು ಪಾಠ ಸಮಕಾಲದಲ್ಲಿ ಸಂಗ್ರಹಿಸಿ ಬರಹ ರೂಪಕ್ಕೆ ತಂದವರು ಶ್ರೀ ಛಾಯಾಪತಿ ಎಂಬುವರು.

ಪಾಠಕ್ಕಾಗಿ ಕುಳಿತುಕೊಳ್ಳುವ ಮೊದಲೇ ಪ್ರಯೋಗದ ಉದ್ದೇಶದಿಂದ ಗೃಹೋಪಯೋಗಿಗಳಾದ ಎಂಟು-ಹತ್ತು ಸಾಮಾನುಗಳನ್ನು ಬೇರೆ ಬೇರೆಯಾಗಿ ಶ್ರೀ ಗುರುಗಳ ನಿರ್ದೇಶನದಂತೆ ತಂದಿಡಲಾಗಿದೆ. ಪಾಠದ ಸಂದರ್ಭದಲ್ಲಿದ್ದವರು ಮೂವರು. ಉತ್ಸುಕಚಿತ್ತರಾಗಿ ಎಲ್ಲರೂ ಕುಳಿತಿದ್ದಾರೆ. ಪಾಠಕ್ಕಾಗಿ ದಯಮಾಡಿಸಿದ ಶ್ರೀಗುರುಗಳು ಸ್ವಲ್ಪ ಹೊತ್ತು ಅಂತರ್ಭಾವದಲ್ಲಿದ್ದು, ಪಾಠಕ್ಕಾಗಿ ಬಂದಿದ್ದವರನ್ನೂ, ಉಪಕರಣಗಳನ್ನೂ ಒಮ್ಮೆ ನೋಡಿ ಮುಗುಳ್ನಗೆಯಿಂದ ಪಾಠವನ್ನು ಆರಂಭಿಸುತ್ತಾರೆ.)

ಮನುಷ್ಯರ ಜೀವನದ ದಿನಚರಿಯಲ್ಲಿ ಪರಿಚಯವಿರುವ ವಿಷಯವಾದರೂ ಮತ್ತೆ ವಿಷಯವನ್ನು ನೆನಪಿಗೆ ತಂದುಕೊಳ್ಳುವ ಸಲುವಾಗಿ ಒಂದು ಚಿಕ್ಕ ಮಾತನ್ನು ಹೇಳಬೇಕೆಂದಿದ್ದೇನೆ, ಯಾವ ವಿಷಯವನ್ನಧಿಕರಿಸಿ ಹೇಳುವುದೆಂದರೆ ಪ್ರಮೆ, ಭ್ರಮೆ, ಎರಡನ್ನೂ ಕುರಿತು ಹೇಳಬೇಕೆಂದಿದ್ದೇನೆ.

ಜೀವನದಲ್ಲಿ ಭ್ರಮಿಸಿದೆ ಎನ್ನುವ ವಿಷಯ ಹೇಳಬೇಕಾದರೆ ಪ್ರಮೆ ಎನ್ನುವುದು ಏನು ಎನ್ನುವುದೂ ತಿಳಿದಿರಬೇಕು. ಲೋಕದಲ್ಲಿ ಯಥಾವಸ್ಥಿತವಾಗಿ ತೆಗೆದು ಕೊಂಡಿದ್ದೇನೆ. ಸತ್ಯವಾಗಿ ಹೇಳುತ್ತೇನೆ. ಎನ್ನುವ ವ್ಯವಹಾರ ಬಂದರೂ ಪ್ರಮಾಣ ವಾಗಿದೆಯೆ ಎಂದು ಗಮನಿಸಿ ತೆಗೆದುಕೊಳ್ಳಬೇಕು. ವ್ಯವಹಾರ ಕಿವಿಯಲ್ಲಿ ಬಿದ್ದರೆ ಹಾಗೆ ಬಿದ್ದದ್ದನ್ನೆಲ್ಲಾ ನಿಜ ಎಂದು ನಂಬುವುದಕ್ಕಾಗುವುದಿಲ್ಲ. ಪರಿಶೀಲಿಸಿ ತೆಗೆದುಕೊಳ್ಳಬೇಕು, ಕುದುರೆಗೆ ಎರಡು ಕೊಂಬಿದೆ ಎಂದು ಹೇಳಿದರೆ ನಿಜವಾದ ಕುದುರೆಯನ್ನು ಹುಡುಕಿದರೆ ಕೊಂಬು ಸಿಕ್ಕುತ್ತದೆಯೇ? ಆದರೆ ಗುರುವಾದವನು ಕುದುರೆಗೆ ಎರಡು ಕೊಂಬಿದೆ ಎಂದು ಪ್ರಾಮಾಣಿಕವಾಗಿಯೂ ಹೇಳಬಹುದು. ಹೇಗೆಂದರೆ "ಕುದುರೆ" ಎಂದು ಬರೆಯುವಾಗ "ಕ'' ಕ್ಕೆ ಒಂದು ಕೊಂಬು, ''ದ" ಕ್ಕೆ ಒಂದು ಕೊಂಬು ಬರೆದು ನಂತರ 'ರೆ' ಬರೆಯಬೇಕು. ಇಲ್ಲಿ (ಬರವಣಿಗೆ ಯಲ್ಲಿ) ಎರಡು ಕೊಂಬಿಲ್ಲದಿದ್ದರೆ ಕುದುರೆ ಹೋಗಿ ಕದರೆಯಾಗುತ್ತದೆ. ಹೀಗಿರು ವಲ್ಲಿ ಕುದುರೆಗೆ ಎರಡು ಕೊಂಬಿದೆ ಎಂಬುದು ಲಿಪಿಯನ್ನು ನೋಡಿ ಹೇಳಿದ ಮಾತು ಎಂಬ ಅರ್ಥದಲ್ಲಿ ತೆಗೆದುಕೊಂಡರೆ ಪ್ರಾಮಾಣಿಕವೇ ಆಗುತ್ತದೆ.

ಆದ್ದರಿಂದ ಪ್ರಾಮಾಣಿಕತೆಯ ಜಾಗವನ್ನು ಶಿಷ್ಯನು ಗುರುತಿಸಿ ತೆಗೆದು ಕೊಳ್ಳಬೇಕು. ಹೇಳುತ್ತಿರುವ ವಿಷಯವನ್ನು ಹಾಗೇ 'ಫಾಲೋ' (follow ॥ ಹಿಂಬಾಲಿಸು) ಮಾಡಬೇಕು. 'ಶಿಷ್ಯ' ಎನ್ನುವ ಪದವೇ 'ಶ್ಲಿಷ್ಯತೇ' ಗುರುವಿನ ಅಭಿಪ್ರಾಯದ ಜೊತೆಗೆ ಸೇರಿಕೊಳ್ಳುವವನು ಎಂದು ಅರ್ಥ ಕೊಡುತ್ತದೆ. "ಗುರು" ಎಂಬ ಪದ ಅಂಧಕಾರ ನಿವೃತ್ತಿ ಮಾಡುವವನು ಎಂಬರ್ಥದಲ್ಲಿದೆ. ಅವನಿಗೂ (ಗುರುವಿಗೂ–ಅಂದರೆ 'ಗುರು' ಎಂಬ ಪದಕ್ಕೂ) ಎರಡು ಕೊಂಬಿದೆ. ಕೊಂಬಿಲ್ಲದಿದ್ದರೆ 'ಗರ' ವಿಷ ಎಂದಾಗುತ್ತದೆ. ಅಂದರೆ ಅವನು ಶೃಂಗಸ್ಥಾನ (ಶೃಂಗ= ಕೊಂಬು, ಉನ್ನತ) ದಲ್ಲಿದ್ದುಕೊಂಡು ವಿಷಯವನ್ನು ಹೇಳಬೇಕು. ?ರುವು ಪ್ರಾಮಾಣಿಕವಾಗಿ ವಿಷಯವನ್ನಿಟ್ಟಾಗ ಟೈಮ್‌ಸ್ಪೇಸನ್ನು ((time-s?ace) ನೋಡಿ ತೆಗೆದುಕೊಳ್ಳಬೇಕು. ನಿಜವಾದ ಕುದುರೆಗೇ ಎರಡು ಕೊಂಬಿದೆ ?ಂದರೆ ಹಾಗಾದರೆ ಅಲ್ಲಿ ಕುದುರೆ ಎನ್ನುವ ವ್ಯವಹಾರ ಇನ್ನಾವುದೋ ಕೊಂಬಿರುವ ?ಾಣಿಗೆ ಮಾಡಿಕೊಂಡಿರುವ ಸಂಕೇತವಾಗಿರಬೇಕು. ಇಲ್ಲ ಪರಿಭಾಷೆಯಾಗಿರ ಬೇಕು. (ಪಾರಿಭಾಷಿಕವಾಗಿ ಬಳಸಿರಬೇಕು)

ಲೋಕದಲ್ಲಿ "ಭ್ರಮೆ" ಎಂದರೆ "ನಾನೇನು ಎಳೆಯ ಮಗುವೇ ಭ್ರಮಿಸ ವುದಕ್ಕೆ? ಮುದುಕನೇ ಭ್ರಮೆ ಬರುವುದಕ್ಕೆ" ಎಂದು ಕೋಪಿಸಿಕೊಳ್ಳುವುದುಂಟು. ?ದರೆ ವಿಷಯದ ದೃಷ್ಟಿಯಿಂದ ನೋಡಿದಾಗ ''ಭ್ರಮೆ" ಇಂತಹವರಿಗೇ ಬರಬೇಕೆಂಬ ನಿಯಮವೇನೂ ಇಲ್ಲ. ನಾವು ಒಂದು ವಿಷಯವನ್ನು ಸತ್ಯವಾಗಿ ತಿಳಿದುಕೊಳ್ಳ

ಬೇಕಾದರೆ, ಪ್ರಮಾಣ ಅಂದರೆ ಅಳೆಯುವ ಸಾಧನ, ಪ್ರಮಾತಾ ಅಂದರೆ ತಿಳಿದು ಕೊಳ್ಳುವವನು, ಪ್ರಮೇಯ ಅಂದರೆ ತಿಳಿದುಕೊಳ್ಳಬೇಕಾದ ವಿಷಯ ಈ ಮೂರನ್ನೂ ತಿಳಿದುಕೊಳ್ಳಬೇಕು. ಮೂರೂ ಸರಿಯಾಗಿರಬೇಕು, ಇದರಲ್ಲಿ ಯಾವುದು ತಪ್ಪಿದರೂ ಪ್ರಮಾಣವಲ್ಲ.

"ಇದನ್ನೇ ಪ್ರಮಾಣವೆಂದು ವ್ಯವಹಾರ ಮಾಡುತ್ತಾರೆ. "ಇದಕ್ಕೆ ಪ್ರಮಾಣವಚನ ಗೀತೆಯಲ್ಲಿದೆ. ರಾಮಾಯಣದಲ್ಲಿದೆ,'' ಎಂದು ಹೇಳುತ್ತಾರೆ, ಆದರೆ ಪರಿಶೀಲನೆಯಿಲ್ಲ. ಅಂದರೆ ತಾವು ಹೇಳುವ ಯಾವುದೋ ಒಂದು ವಿಷಯವು ಪ್ರಮಾಣಬದ್ಧವಾದುದೆಂದು ತೋರಿಸಲು ಗೀತೆ, ರಾಮಾಯಣಗಳ ಮಾತುಗಳನ್ನು ಹೇಳುತ್ತಾರೆ. ಆದರೆ "ಗೀತೆ-ರಾಮಾಯಣಗಳ ವಚನಗಳು ಇವರು ಹೇಳುವ ವಿಚಾರಗಳಿಗೆ ಪ್ರಮಾಣವಾಗುವುದು ಹೇಗೆ?'' ಎಂಬುದನ್ನು ನೋಡುವುದಿಲ್ಲ. ಗೀತೆ-ರಾಮಾಯಣಗಳು ಕೆಲವು ವಿಷಯಗಳನ್ನು ಪ್ರಮಾಣವಾಗಿ ತಿಳಿಸಬಹುದಾದರೂ ನಾವು ಹೇಳುವ ಎಲ್ಲ ವಿಷಯಕ್ಕೂ ಅವು ಪ್ರಮಾಣ ಗ್ರಂಥಗಳಲ್ಲ,

ಒಂದು ವಿಷಯ ಹೇಳಿದಾಗ ಅದನ್ನು ಹೇಳಿದವರು ಯಾವ ಅರ್ಥದಲ್ಲಿ ಹೇಳಿದ್ದಾರೆ ಎಂದು ಗಮನಿಸದಿದ್ದರೆ ಅಭಿಪ್ರಾಯ ಸರಿಯಾಗಿ ತಿಳಿಯುವುದಿಲ್ಲ. ಬಿಸಿ ನೀರಿಗೆ ಏನು ಹಾಕಿ ಕುಡಿಯಬೇಕು? ಕೇಸರಿ, ಏಲಕ್ಕಿ, ಲವಂಗ, ಮೊದಲಾದುವುಗಳನ್ನು ಹಾಕಿ ಕುಡಿಯಬೇಕು. ''ಅಷ್ಟೇ ಅಲ್ಲ, ಜೊತೆಗೆ ಬೆರಳು ಹಾಕಿ ಕುಡಿಯಬೇಕು" ಎಂದು ಗುರುಗಳು ಹೇಳಿದರು, ''ಬಿಸಿನೀರಿಗೆ ಬೆರಳು ಹಾಕಿ ಕುಡಿಯುವುದೇ? ಛೆ! ಅಸಂಬದ್ಧ," ಎಂದು ಹಾಗೇ ಕುಡಿದರೆ ನಾಲಿಗೆ ಸುಡುವುದು. ಆಗ ಅರ್ಥವಾಗುವುದು 'ಬಿಸಿ ನೀರಿಗೆ ಬೆರಳು ಹಾಕಿ ಕುಡಿಯಬೇಕು.' ಎಂದರೆ ''ಕೇಸರಿ ಏಲಕ್ಕಿಗಳಂತೆ ಬೆರಳನ್ನು ಕುಯ್ದು ಹಾಕಿ ಕುಡಿಯುವುದು ಎಂದು ಅರ್ಥವಲ್ಲ; ಅದರಲ್ಲಿ ಉಷ್ಣತೆ ಹೇಗಿದೆ ಎಂದರಿಯಲು ಬೆರಳು ಹಾಕಿ ನೋಡಿ ಕುಡಿಯಬೇಕು, ಎಂದು, ಈ ಅರ್ಥ ತೆಗೆದುಕೊಂಡರೆ ಬೆರಳು ಹಾಕಿ ಕುಡಿಯಬೇಕು, ಎಂಬ ಮಾತು ಪ್ರಮಾಣ ಬದ್ಧವಾಗಿಯೇ ಇದೆ. ಹಾಗೆ ಮಾಡದಿದ್ದರೆ ನಾಲಿಗೆ ಸುಡುತ್ತದೆ.


ಯಾವುದೇ ವಿಷಯವಾದರೂ 'ಥಿಯರಿ' (Theory) ಯಲ್ಲಿ ನಿಂತರೆ ಸರಿಯಲ್ಲ. ಪ್ರಾಕ್ಟಿಕಲ್ (Practical) ಗೆ ಬರಬೇಕು, ಹೇಳಿದಷ್ಟನ್ನು ಮಾತ್ರ ತೆಗೆದುಕೊಂಡು ಸುಮ್ಮನೆ ಶ್ರದ್ಧೆಯಿಂದ ಹೇಳಿದುದೇನು ಎಂಬ ಅಂಶವನ್ನೇ ವಿಚಾರಿಸಹೋಗದೇ ಒಪ್ಪಿಕೊಂಡರೆ ಮೂರ್ಖತೆ ಮಾತ್ರ ಉಳಿಯುತ್ತದೆ. ಸುಡುವ

ನೀರಿಗೆ ಕೈಹಾಕಿದಾಗ ಒಬ್ಬನ ಕೈ ಸುಟ್ಟಿತು. ನಮ್ಮ ಗುರುಗಳು 'ಬೆಂಕಿ ಸುಡುತ್ತದೆ" ಎಂದು ಮಾತ್ರ ಹೇಳಿದ್ದರು. ಬಿಸಿ ನೀರಿಗೆ ಕೈಹಾಕಿದರೆ ಸುಡುತ್ತದೆ ಎಂದು ಹೇಳಿರಲಿಲ್ಲ. ಆದ್ದರಿಂದ ಸ್ವಲ್ಪವೂ ಸುಡಲಿಲ್ಲ,'' ಎಂದಂದು ಕೊಂಡರೆ ಗುರುವೇ ಇದನ್ನು ಕೇಳಿದರೆ ಏನೆಂದು ಕೊಳ್ಳಬೇಕು? ''ಒಳ್ಳೆ ಸರಿಯಾದ ಶಿಷ್ಯ' ನಾನು ಹೇಳಿದ್ದೇನು? ಅವನು ತೆಗೆದುಕೊಂಡದ್ದೇನು?'' ಎಂದುಕೊಳ್ಳಬೇಕಾಗುತ್ತದೆ, "ಸುಡುವುದು-ಎನ್ನುವುದೇನು? ಗುರು ಎಲ್ಲಿಂದ ಅದನ್ನು ಹೇಳಿದ? ಪ್ರಕೃತಿಯಲ್ಲಿ ಸುಡುವ ಧರ್ಮವಿದ್ದದ್ದನ್ನು ತೆಗೆದುಕೊಂಡು ಪರಿಚಯಕ್ಕೋಸ್ಕರ ಗುರು ಹೇಳಿದ'' ಎಂದರ್ಥಮಾಡಿಕೊಂಡಾಗ ಸುಡುವಿಕೆ ಎಂದರೇನು ಎನ್ನುವುದು ಅರ್ಥವಾಗುತ್ತದೆ. ಹಾಗರ್ಥಮಾಡಿಕೊಂಡರೆ ಸುಡುವ ಎಲ್ಲಾ ಪದಾರ್ಥಗಳ ಪಟ್ಟಿಯನ್ನು ಕೊಡಬೇಕಾಗಿಲ್ಲ. ಇತರರ ಬಲವಂತಕ್ಕಾಗಿಯೂ ಒಪ್ಪಿಕೊಳ್ಳಬೇಕಾಗಿಲ್ಲ, ವಿಷಯವೇ ಒಪ್ಪಿಸುತ್ತದೆ. ಹೀಗೆ ಯಾವುದೇ ಸಂದರ್ಭದಲ್ಲಿಯೂ ಷಯವನ್ನು ತೆಗೆದುಗೊಳ್ಳುವಾಗ ವಿಷಯವೇ ಬಂದು ಒಪ್ಪಿಸುವ ರೀತಿದಲ್ಲಿದೆಯೇ! ಎಂಬುದನ್ನು ಪರಿಶೀಲಿಸಿ ನೋಡಬೇಕು.

(ಎದುರಿಗೇ ಇದ್ದರೂ ಮನಸ್ಸಿನ ಆಶಯದತ್ತ ಗಮನ ಕೊಡದಿದ್ದರೆ ಭ್ರಮೆಯಾಗುತ್ತದೆ ಎಂಬಂಶವನ್ನು ಕುಶಲಚಿತ್ರಕಾರನಾದ ಶ್ರೀಗುರುವು ಚಿತ್ರಗಳ ಮೂಲಕ ವಿವರಿಸುವ ವಿಷಯ ಇಲ್ಲಿದೆ. ಶ್ರೀಗುರುವು ತನ್ನ ಮನಸ್ಸಿನಲ್ಲಿ ಒಂದು ಚಿತ್ರವನ್ನು ಇಟ್ಟುಕೊಂಡು, ಅದಕ್ಕನುಗುಣವಾಗಿ ಗೆರೆ ಹಾಕುತ್ತಿದ್ದರು, ಪ್ರತಿ ಹೆಜ್ಜೆಯಲ್ಲಿಯೂ ಇದೇನು, ಇದೇನು, ಎಂದು ಕೇಳುತ್ತಿದ್ದರು. ರೇಖೆ ತಮಗೆ ಹೇಗೆ ಕಾಣುತ್ತಿದೆಯೋ ಹಾಗೆ ಎದುರಿಗಿರುವವರು ಉತ್ತರಿಸುತ್ತಿದ್ದರು. ಆದರೆ ಅವರ ಮನಸ್ಸಿನಲ್ಲಿದ್ದ ಚಿತ್ರಕ್ಕೆ ಪೋಷಕವಾದ ಗೆರೆಗಳವು ಎಂಬುದು ಯಾರೂ ಅರಿಯಲಿಲ್ಲ. ಕೊನೆಗೆ ಚಿತ್ರ ಪ್ರಕಟವಾದಾಗ ಈ ಅಂಶ ಮನಸ್ಸಿಗೆ ಬಂದಿತು. ಎದುರಿಗಿದ್ದು ಅನುಭವಿಸಿದಾಗ ಮಾತ್ರ ಅರಿವಿಗೆ ಬರುವ ಈ ಘಟನೆಯ ಸ್ವಾರಸ್ಯವನ್ನು ವರ್ಣನೆಯ ಮೂಲಕ ತಿಳಿಯಪಡಿಸುವುದು ಕಷ್ಟ. ಆದರೂ ಸಹೃದಯರಾದ ಓದುಗರು ಘಟನೆಯನ್ನು ಇಲ್ಲಿರುವ ವರ್ಣನೆಯ ಸಹಾಯದಿಂದ ಮನಸ್ಸಿಗೆ ತಂದುಕೊಳ್ಳಬಲ್ಲರೆಂಬ ಭರವಸೆಯಿಂದ ಯಥಾಮತಿಯಾಗಿ ಘಟನೆಯನ್ನು ವಿವರಿಸಲಾಗಿದೆ.)

ಶ್ರೀ ಗುರುವು ಕಾಗದವೊಂದರ ಮೇಲೆ ಪೆನ್ನಿನಿಂದ ಗೆರೆ ಹಾಕಲು ತೊಡಗಿದರು. ಎಲ್ಲಾ ಜೋಡಿ ಗೆರೆಗಳು, ||, =, ||, ||, ಈ ರೀತಿಯಾದ ಗೆರೆಗಳು ಉದ್ದಕ್ಕೂ ಕಾಣುತ್ತಿದ್ದವು. ಒಂದೊಂದು ಗೆರೆ ಹಾಕಿದ ಬಳಿಕಲೂ ಇದೇನು? ಇದೇನು? ಎಂದು ಕೇಳಿದಾಗ, ಹನ್ನೊಂದು, ಈಕ್ವಲ್ಸ್ (equals)


ಪ್ಯಾರಲಲ್ ಲೈನ್ (parallel line = ಸಮಾನಾಂತರರೇಖೆ) ಎಂಬ ಉತ್ತರಗಳೇ ಬರುತ್ತಿದ್ದವು. ಉಚಿತ ಸ್ಥಾನಗಳಲ್ಲಿ ಈ ಜೋಡು ಗೆರೆಗಳನ್ನಿಟ್ಟು ಚಿತ್ರ ಪೂರೈಸಿದ ಮೇಲೆ ನೋಡಿದಾಗ ಅದೊಂದು ಆಡಿನ ಚಿತ್ರವಾಗಿತ್ತು. ಆ ಚಿತ್ರದ ಪೂರ್ಣಗೊಂಡ ರೂಪವನ್ನು ಪಾರ್ಶ್ವದಲ್ಲಿ ಕೊಟ್ಟಿದೆ.




ಈ ಚಿತ್ರ ಬರೆಯುವಾಗ ಬರೆಯುವವರ ಮನಸ್ಸಿನಲ್ಲಿದ್ದುದು ಆಡಿನ ಚಿತ್ರ. ಗ್ರಾಹಕರು ನೋಡಿದ್ದು ಬರೆಯುವವರ ಕೈ ಮಾತ್ರ ಮನಸ್ಸಿನ ಕಡೆಗೆ ನಿಗಾ ಕೊಡಲಿಲ್ಲ. ಕೈ ನೋಡಿ ಗೆರೆಯನ್ನು ನೋಡಿ ಹನ್ನೊಂದು. ಈಕ್ವಲ್ಸ್, ಪ್ಯಾರಲಲ್ ಲೈನ್ ಎಂದು ಹೇಳುತ್ತಿದ್ದರೇ ಹೊರತು' ಗೆರೆ ಹಾಕುವವರ ಮನಸ್ಸಿನ ಹಿನ್ನೆಲೆಯಲ್ಲೇನಿದೆ ಎನ್ನುವುದನ್ನು ಗಮನಿಸಲಿಲ್ಲ; ಆ ಗೆರೆಗಳನ್ನು ಹಾಕುವ ಮೊದಲು ಆಡಿನ ಚಿತ್ರ ಬರೆಯಬೇಕೆಂಬ ಜ್ಞಾನ. ನಂತರ ಅದಕ್ಕನುಗುಣವಾದ ಇಚ್ಛೆ, ನಂತರ ಅದೇ ಕ್ರಿಯಾ ರೂಪವಾಗಿ ಬಂದಿದೆ. ಆದರೆ ಗಮನಿಸುವವರು ಕ್ರಿಯೆಯನ್ನು ಮಾತ್ರ ಗಮನಿಸಿದರೇ ಹೊರತು ಅದರ ಹಿಂದೆ ಜ್ಞಾನ, ಇಚ್ಛೆಗಳನ್ನು ಗಮನಿಸಲಿಲ್ಲ. ಆದರೆ ಲೇಖಕರು ಉದ್ದಕ್ಕೂ ಮುಗುಳ್ನಗೆಯನ್ನು ಸೂಚಿಸುತ್ತಾ, ತಮ್ಮ ಮನಸ್ಸಿನಲ್ಲಿದ್ದ ಅಂಶವನ್ನು ಗಮನಿಸಿಲ್ಲವೆಂಬ ಅಂಶವನ್ನು ಸೂಚಿಸುತ್ತಲೇ ಇದ್ದರು. ಹನ್ನೊಂದನ್ನು ಬರೆಯುವುದೇ ಅವರ ಆಶಯವಾಗಿದ್ದರೆ ಬರೆದ ನಂತರ ಲೇಖನಿಯ ಕೆಲಸ ಮುಗಿಯುತ್ತಿತ್ತು. ಎದುರಿನವರು ಏನೇ ಹೇಳಿದರೂ ಲೇಖನಿ ಮುಂದುವರಿಯುತ್ತಲೇ ಇತ್ತು. ಮನಸ್ಸಿನಲ್ಲಿದ್ದ ಅಭಿಪ್ರಾಯ ಪೂರ್ತಿಗೊಂಡ ಬಳಿಕವೇ ಅದು ನಿಂತಿತು. ಲೇಖಕರ ಮನಸ್ಸಿನಲ್ಲಿದ್ದುದು ಆಡಿನ ಚಿತ್ರವೇ ಹೊರತು "ಹನ್ನೊಂದು ಈಕ್ವಲ್ಸ್ ಒಂದೂ ಅಲ್ಲ. ಅವರ ಬುದ್ಧಿಯನ್ನು ಬಿಟ್ಟು ಎದುರಾಳಿಗಳು ಅವರವರ ಬುದ್ಧಿಗಳು ಆ ಗೆರೆಗಳನ್ನು ಏನೆಂದು ಕೊಂಡಿದ್ದವೋ ಅಷ್ಟನ್ನು ಮಾತ್ರ ಹೇಳಿದರು. ಆದ್ದರಿಂದ ಪ್ರತ್ಯಕ್ಷಕ್ಕೆ ಕಾಣಿಸುವುದು ಎಂಬ ವಿಷಯ ನಿಜವಾದರೂ ಪ್ರಮಾಣಿಸಿ ನೋಡಲಿಲ್ಲ. ಏಕೆ ಗೆರೆಗಳು ಮುಂದುವರಿಯುತ್ತಿವೆ? ಏನಾಗುವುದು ಅವುಗಳ ಉದ್ದೇಶ ಎಂದು ಗಮನಿಸಲಿಲ್ಲ. ಈ ಗೆರೆಗಳಿಗೆ ಏನು ಅರ್ಥ ಎಂದರೆ ಅದು ಯಾವ ಜ್ಞಾನ, ಇಚ್ಛೆ, ಕ್ರಿಯೆಗಳಿಂದ ಹೊರಟಿದೆಯೋ ಅದೇ ಆ ಚಿತ್ರಕ್ಕೆ ಅರ್ಥ. ಆಡನ್ನು ಬರೆಯಬೇಕೆಂಬ ಜ್ಞಾನದಿಂದ ಅದಕ್ಕನುಗುಣವಾದ ಇಚ್ಛೆ, ಕ್ರಿಯೆಗಳು ಮುಂದುವರಿದುವು. ಈ ಹಿನ್ನೆಲೆ ಇಲ್ಲದೆ ಚಿತ್ರ ಗಮನಿಸಿದಾಗ ಈಕ್ವಲ್ ಪ್ಯಾರಲಲ್ ಲೈನ್, ಇಷ್ಟೇ ಗಮನಿಸಿದರೆ ಜಾಮಿಟ್ರಿ ಆಗಿಬಿಡುತ್ತೆ. ಏನಯ್ಯ ಅದೂ ಸಾಯಂಕಾಲ ಒಂದು ಘಂಟೆ ಕುಳಿತುಕೊಂಡು ಹೇಳಿದುದು ಎಂದರೆ ಅದೇ ಈಕ್ವಲ್ಸ್

ಪ್ಯಾರಲಲ್ ಲೈನ್ ಎಂದು ಜಾಮಿಟ್ರಿ ಹೇಳಿದರು ಎನ್ನಬೇಕಾಗುತ್ತದೆ. ಆದರೆ ಗುರುವನ್ನೇ ಕೇಳಿದರೆ ಇಲ್ಲವಲ್ಲಾ, ನಾನು ಜಾಮಿಟ್ರಿ ಪಾಠ ಹೇಳಲಿಲ್ಲವಲ್ಲಾ ಎಂದು ತಾನೇ ಹೇಳಬೇಕು! ಪ್ರತ್ಯಕ್ಷಿಸಿಯೇ ನೋಡಿದರೂ ಪ್ರಮಾಣಿಸಿ ನೋಡದೇ ಇರುವುದರಿಂದ ಗುರುವಿನ ಎದುರಿಗಿದ್ದ ಶಿಷ್ಯರಲ್ಲೇ ಇಷ್ಟು ವ್ಯತ್ಯಾಸ ಬರುತ್ತೆ, ಆದರೆ ಪಾಠದಲ್ಲಿ =, ॥, ಈ ಎಲ್ಲ ರೇಖೆಗಳೂ ಇದ್ದದ್ದೇನೂ ನಿಜ, ಜಾಮಿಟ್ರಿಯಲ್ಲಿ ಅವು ಬರುವುದೂ ನಿಜ' ಅದೂ ಸುಳ್ಳಲ್ಲ, ಆದರೆ =, ॥, ಈ ಗೆರೆಗಳನ್ನು ಹಾಕುವಾಗ ಗುರುವಿನ ಮನಸ್ಸಿನಲ್ಲಿದ್ದದ್ದು ಆಡಿನ ಚಿತ್ರವೇ ಹೊರತು ಜಾಮಿಟ್ರಿ ಪಾಠವಲ್ಲ. ಹೀಗೆ ಎದುರಿಗೇ ಇದ್ದು ವಿಷಯವನ್ನು ಕೇಳಿದರೂ ಮೂಲವನ್ನು ಗಮನಿಸದಿದ್ದಾಗ ಭ್ರಮೆ ಬರುವುದು ಸಾಧ್ಯ. ಆದ್ದರಿಂದ ಮೂಲದ ಕಡೆಗೆ ನಿಗಾಬೇಕು.

("ಈ ವಿಷಯ ಮೊದಲೇ ಗೊತ್ತಿರಲಿಲ್ಲ. ಮೋಸ ಹೋಗಿಬಿಟ್ಟೆವು". ಎಂದು ಅಲ್ಲೊಬ್ಬರು ಮೆಲು ಮಾತಿನಲ್ಲಿ ಆಡಿಕೊಂಡರು. ಆ ವಿಷಯವನ್ನು ಗಮನಿಸಿ ವಿಷಯವನ್ನು ದೃಢಪಡಿಸಲು ಶ್ರೀಗುರುವು ಮತ್ತೊಂದು ಚಿತ್ರಪ್ರಯೋಗವನ್ನಾರಂಭಿಸಿದರು) "ನೋಡಿ, ಮೊದಲೇ ಗೊತ್ತಿರಲಿಲ್ಲ, ಮೋಸಹೋಗಿಬಿಟ್ಟೆವು" ಎಂದಿರಿ. ಈಗ ಜಾಗರೂಕರಾಗಿ ಗಮನಿಸಿ. ನಾನು ಬರೆಯ ಹೊರಟಿರುವುದೇನು ಎಂಬುದನ್ನು ನಿಧಾನವಾಗಿ ಗಮನಿಸಿಯೇ ಹೇಳಿ. ಅವಸರವೇನೂ ಬೇಕಾಗಿಲ್ಲ ನಿಧಾನವಾಗಿ ಯೋಚಿಸಿಯೇ ಹೇಳಬಹುದು. 1, 2, 3, 4, 5 ಮೊದಲಾದ ಅಂಕಿಗಳನ್ನು ಹೋಲುವ ರೇಖಾವಿನ್ಯಾಸದಿಂದ ಒಂದು ಮನುಷ್ಯನ ತಲೆಯ ಚಿತ್ರವನ್ನು ಬರೆದರು. ಈಗಲೂ ಪ್ರತಿ ಬಾರಿಯೂ ಶ್ರೀಕರ್ಣ ಎಂಬುವರು 1, 2, 3, ಎಂದು ಅಂಕಿಗಳನ್ನೇ ಹೇಳುತ್ತಾ ಬಂದರು. ಆಗ ಶ್ರೀಯುವರು ನಗುತ್ತಾ ಸರಿ ಹೋಯಿತು, ಈ ಸಲವೂ ಅಂಕಿಯೇ ಆಯಿತು. ಬರೆಯುವವರ ಮನಸ್ಸಿನಲ್ಲಿದ್ದದ್ದು ಮನುಷ್ಯನ ತಲೆ, ಆದರೆ ಗಮನಿಸಿದ್ದು ಮಗ್ಗಿಯನ್ನು.





ಇನ್ನಾದರೂ ಗಮನಿಸಿ ಎಂದು ಗಿಣಿಯ ಚಿತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ಒಂದು ರೇಖೆಯನ್ನು ಹಾಕಿದರು. ಅಲ್ಲಿದ್ದವರೊಬ್ಬರು ಅದನ್ನು ನೋಡಿ ಹೊಟ್ಟೆಯ ಚಿತ್ರ ಎಂದರು. ಆದರೆ ಅದೇ ಮತ್ತೆ ರೇಖಾವಿನ್ಯಾಸ ಮುಂದುವರಿದಾಗ ಗಿಣಿಯ ಚಿತ್ರವಾಯಿತು.

ನೋಡಿ ನೀವಾಗಿಯೇ ನೋಡಿದ ವಿಷಯ ಇದು ನಿಜ. ಆದರೆ ಕಣ್ಣು ಒಂದರಿಂದಲೇ



ತೀರ್ಮಾನಕ್ಕೆ ಬರಲಾಗಲಿಲ್ಲ. ಅದರ ಜೊತೆಗೆ ಪ್ರಮಾಣಿಸಿನೋಡಬೇಕು. ಬರೆಯುವವನ ಮನಸ್ಸನ್ನು ಅವನ ಬುದ್ಧಿಯನ್ನು ಹಿಂಬಾಲಿಸಬೇಕು. ಹಾಗೆ ಹಿಂಬಾಲಿಸಿದರೆ ಅಲ್ಲಿ ವಿಷಯ ಸಿಕ್ಕುತ್ತೆ. ಮೋಸ ಹೋಗುವ ಜಾಗಗಳು ಅನೇಕ ಇರುತ್ತವೆ. ವಿಮರ್ಶೆಯು ಜೊತೆಯಲ್ಲಿ ಸಾಗಬೇಕು. ಕಣ್ಣಿಗೆ ನೋಡಿದ ವಿಷಯವಾಯಿತು, ಕಿವಿಗೆ ಕೇಳಿದ ವಿಷಯವಾಯಿತು. ಎಂದಿಷ್ಟರಿಂದಲೇ ತೀರ್ಮಾನಿಸಲಾಗುವುದಿಲ್ಲ.

ಹಿಂದಿನ ಉದಾಹರಣೆಗಳನ್ನು ಗಮನಿಸಿದರೆ ಬರೀ ನೋಟದಿಂದಲೇ ವಿಷಯ ತೀರ್ಮಾನಿಸಲಾಗುವುದಿಲ್ಲ ಎಂಬುದನ್ನು ಗಮನಿಸಿಯಾಯಿತು. ವಿಷಯದ ದೃಷ್ಟಿಯಿಂದ ಹೇಳುವುದಾದರೆ ನೀವು ಹೇಳಿದ ಈಕ್ವಲ್ಸ್, ಪ್ಯಾರಲಲ್ ಲೈನ್ ಇವೆಲ್ಲಾ ಪ್ರಮಾಣವಲ್ಲ. ನಿಜಕ್ಕೆ ಹೊಂದುವುದಿಲ್ಲ ಎಂದು ತಳ್ಳಿ ಹಾಕ ಬೇಕಾಗುತ್ತದೆ. ನಾವು ಬರೆಯ ಹೊರಟ ಚಿತ್ರಕ್ಕೆ ಅನುಗುಣವಾದದ್ದು ಪ್ರಮಾಣವೇ ಹೊರತು ವಿಗುಣವಾದದ್ದೆಲ್ಲಾ, ಪ್ರಮಾಣವಲ್ಲ ಅಪ್ರಮಾಣವೇ, ಪ್ಯಾರಲಲ್ ಲೈನ್ ನಂತೆ ಇದ್ದರೂ ಅದು ಪ್ಯಾರಲಲ್‌ಲೈನ್ ಆಗೇ ನಿಲ್ಲುವುದಿಲ್ಲ. ಆದ್ದರಿಂದ ಅದು ಇಲ್ಲಿ ಪ್ರಮಾಣವಲ್ಲ, ಮನಸ್ಸಿನಲ್ಲಿ ಸಿದ್ಧವಾಗಿರುವ ಆಕಾರವನ್ನು ಹೊರಗಿಡಲು ಆರೇಖೆ ಒಂದು ಸಾಧನವಷ್ಟೇ. ಸಿದ್ಧವಾಗುವ ವಿಷಯಕ್ಕೆ ಸಾಧನವಾಗುವ ಪಕ್ಷೇ ಅದು ಗ್ರಾಹ್ಯವೇ. ಸಾಧನ, ಅದರಿಂದ ಸಾಧಿಸಬೇಕಾದ ಸಾಧ್ಯ, ಅದರಿಂದ ಒದಗುವ ಫಲರೂಪವಾದ ಸಿದ್ಧಿ ಈ ಮೂರು ಒಂದೇ ಗುಂಪಿನವು. ಜೀವನದಲ್ಲಿ ಸಾಧಿಸಬೇಕಾದುದೇನು? ಅದನ್ನು ನೋಡಿಕೊಂಡು ಅದನ್ನು ಸಾಧಿಸಲು ಸಾಧನೆ. ಆ

ಸಾಧನದಿಂದ ಸಿದ್ಧಿ ಪಡೆಯಬಹುದು, ನನಗೆ ಬಹುದಿನದಿಂದ ಒಂದು ಇಚ್ಛೆಯಿದೆ. ಯಾವಾಗಲೂ ಭಗವಂತನ ನೆನಪಿನಲ್ಲಿರಬೇಕು ಎಂದರೆ ಅದು ಸಾಧ್ಯ ಅಂದರೆ ಸಾಧಿಸಬೇಕಾದ ವಿಷಯ. ಅದನ್ನು ಪಡೆಯಲನುಗುಣವಾದ ಕ್ರಿಯೆ–ಸಾಧನೆ. ಆ ಇಚ್ಛೆ ಈಡೇರಿದರೆ ಸಿದ್ಧಿ.

ಅಷ್ಟಾಂಗ ಯೋಗ-೨೧


ಆಸನ ವಿಜ್ಞಾನ (ಮುಂದುವರಿದುದು)

ಆಸನಗಳ ಹಿಂಬದಿಯಲ್ಲಿರುವ ತತ್ವಗಳನ್ನು ಅಧ್ಯಯನ ಮಾಡಲು ಮಯೂರಾಸನವೂ ಸಹ ಒಂದು ಶ್ರೇಷ್ಠವಾದ ನಿದರ್ಶನವಾಗಿರುತ್ತದೆ. ಈ ಆಸನ ದಲ್ಲಿ ಸಾಧಕನು ಕೈಗಳನ್ನು ನೆಲದ ಮೇಲಿಟ್ಟು ಮೊಳಕೈಗಳ ಮೇಲೆ ಶರೀರ ಮಧ್ಯವನ್ನಿರಿಸಿ ಶರೀರವನ್ನು ದಂಡಾಕಾರವಾಗಿ ಮೇಲೆತ್ತಿ ತೂಗುತ್ತಾನೆ. ಶರೀರ ವನ್ನು ಎಡಬಲಭಾಗಗಳಲ್ಲಿ ಬಲೆಯಂತೆ ವ್ಯಾಪಿಸಿರುವ ನಾಡೀ ಪುಂಜಗಳೆಲ್ಲಕ್ಕೂ ಮೂಲವಾದ ಇಡಾ ಪಿಂಗಳಾ ಎಂಬ ಮಹಾನಾಡಿಗಳು ನಾಭಿಯ ಎಡಬಲ–ಪಾರ್ಶ್ವಗಳಲ್ಲಿ ಹಾದು ಹೋಗುತ್ತವೆ. ಆದುದರಿಂದ ಈ ಆಸನದಲ್ಲಿ ಮಣಿಪೂರಕ ಚಕ್ರಸ್ಥಾನದಲ್ಲಿ ಆ ಮಹಾನಾಡಿಗಳು ಬಲವಾಗಿ ಒತ್ತಲ್ಪಡುತ್ತವೆ. ಆ ಒತ್ತು ವಿಕೆಯು ಸಾಧಕನ ಶರೀರದ ಭಾರಕ್ಕೆ ಸಮಾನವಾಗಿರುತ್ತದೆ. ಆ ರೀತಿ ಒತ್ತಿ ಶರೀರವನ್ನು ದಂಡದಂತೆ ನೀಳವಾಗಿ ಚಾಚಿದಾಗ ಶರೀರದ ಸಮಸ್ತ ನಾಡಿಗಳೂ ಚೆನ್ನಾಗಿ ಬಿಗಿ ಮಾಡಿದ ವೀಣೆಯ ತಂತಿಯಂತೆ ತಮ್ಮ ವಕ್ರತೆಯೆಲ್ಲವನ್ನೂ ಕಳೆದುಕೊಂಡು ಸರಳವಾಗುತ್ತವೆ. ಶರೀರದಲ್ಲಿ ವಾಯು ಸಂಚಾರ ಮತ್ತು ರಕ್ತ ಸಂಚಾರಗಳು ತಡೆಯಿಲ್ಲದೆ ಆಗುತ್ತವೆ. ಅದರಿಂದಲೇ ಶರೀರದಲ್ಲಿ ಒಂದು ಅವರ್ಣ ನೀಯವಾದ ಲಾಘವವುಂಟಾಗುತ್ತದೆ. ಪಾಟವವು ಏರ್ಪಡುತ್ತದೆ. ಈ ಬಂಧವು ಅಗ್ನಿಸ್ಥಾನವಾದ ಮೂಲಾಧಾರ ಚಕ್ರದ ಮೇಲೆ ಹೇಳಲಾರದ ಪ್ರಭಾವವನ್ನುಂಟು ಮಾಡುತ್ತದೆ. ಅದರಿಂದ ಜಾಠರಾಗ್ನಿಯು ಬಹಳ ತೀವ್ರವಾಗಿ ವ್ಯಾಪಾರ ಮಾಡುತ್ತದೆ. ಆದುದರಿಂದಲೇ ಯೋಗಗ್ರಂಥಗಳು ಈ ಆಸನದಿಂದ ಕಾಲಕೂಟ ವಿಷವೂ ಸಹ ಸುಲಭವಾಗಿ ಜೀರ್ಣವಾಗುತ್ತದೆ, ಆಹಾರದೋಷವೆಲ್ಲವೂ ನಾಶ ವಾಗುತ್ತದೆ ಎಂದು ಉದ್ಗರಿಸುತ್ತವೆ. ಇದನ್ನು ಸಾಧಿಸಬೇಕಾದರೆ ಮನಸ್ಸಿನ ವ್ಯಾಪಾರವು ಬಹಳ ಆವಶ್ಯಕ.

ಅನಂತರ ನಾವು ವಿಚಾರ ಮಾಡಬೇಕೆಂದಿರುವ ಪಶ್ಚಿಮೋತ್ತಾನಾಸನವು ಆರೋಗ್ಯ ಮತ್ತು ಜ್ಞಾನಸಾಧನೆ ಈ ಎರಡು ದೃಷ್ಟಿಗಳಿಂದಲೂ ಬಹಳ ಮಹತ್ವ

ಆಸನಗಳು

1) ಪದ್ಮಾಸನ




ಚಿತ್ರ 1–ಕ




ಚಿತ್ರ 1–ಖ

2) ಪಶ್ಚಿಮೋತ್ತಾನಾಸನ

ಚಿತ್ರ 2–ಕ



ಚಿತ್ರ 2-ಖ



ಪೂರ್ಣವಾದುದು. ನಮಗಂತೂ ಇದು ವಿಶೇಷವಾದ ಅರ್ಥವನ್ನು ಹೊಂದಿರುವ ಆಸನವಾಗಿದೆ. ಏಕೆಂದರೆ ಪದ್ಮಾಸನ ಮತ್ತು ಈ ಪಶ್ಚಿಮೋತ್ತಾನಾಸನಗಳು ಆವರ ಹರೆಯದಲ್ಲಿ ಶ್ರೀರಂಗ ಗುರುವಿನ ವಿಶೇಷವಾದ ಅನ್ವೇಷಣೆಗೆ ವಿಷಯಗಳಾಗಿದ್ದುವು. ಅವುಗಳ ಒಳ ರಹಸ್ಯವನ್ನು ಕಂಡುಕೊಳ್ಳಲು ಅವರು ದೀರ್ಘಕಾಲ ಸಂಶೋಧನೆ ನಡೆ ಸಿದರು. ಅವರ ಸಂಶೋಧನೆಗೆ ವಿಷಯವಾದ ಎರಡು ಆಸನಗಳ ಪೈಕಿ ನಾವು ಪದ್ಮಾಸನವನ್ನು (ಚಿತ್ರ 1) ಈಗಾಗಲೇ ವರ್ಣಿಸಿರುತ್ತೇವೆ. ಅವರು ನಮಗೆ ಹೇಳಿ ದಂತೆ ಇಲ್ಲಿ ಪಶ್ಚಿಮೋತ್ತಾನಾಸನವನ್ನು ವಿವರಿಸುತ್ತೇನೆ.

ಈ ಆಸನದಲ್ಲಿ (ಚಿತ್ರ 2) ಸಾಧಕನು ಎರಡು ಕಾಲುಗಳನ್ನೂ ದಂಡದಂತೆ ಚಾಚಿ ಪಾದಾಂಗುಷ್ಠಗಳನ್ನು ಬೆರಳುಗಳಿಂದ ದೃಢವಾಗಿ ಹಿಡಿಯುತ್ತಾನೆ. ಮತ್ತು ಹಿಮ್ಮಡಿಗಳನ್ನು ನೆಲದ ಮೇಲೆ ಚೆನ್ನಾಗಿ ಒತ್ತುತ್ತಾನೆ. ಪಾದಾಂಗುಷ್ಠ, ಹಿಮ್ಮಡಿ ಯನ್ನು ಮರ್ಮಸ್ಥಾನಗಳು. ಎಂದರೆ ಶರೀರದ ಮುಖ್ಯವಾದ ಗ್ರಂಥಿಸ್ಥಾನಗಳು. ಅವುಗಳನ್ನು ಆರೀತಿ ನಿರೋಧ ಮಾಡುವುದರಿಂದ, ಪ್ರಾಣಶಕ್ತಿಗಳು ಹಿಮ್ಮುಖವಾಗಿ ಹರಿಯುತ್ತವೆ. ಅದೇ ರೀತಿ ಕೈಬೆರಳುಗಳನ್ನು ಬಿಗಿ ಹಿಡಿಯುವುದರಿಂದ, ತೋಳು ಗಳಲ್ಲಿಯೂ ಸಹ ಅವುಗಳ ಹಿಮ್ಮುಖವಾದ ಸಂಚಾರವೇರ್ಪಡುತ್ತದೆ. ಆಸನಕ್ಕೆ ಪಶ್ಚಿಮತಾನ ವೆಂಬ ಹೆಸರು ಬರಲು ಇದೇ ಕಾರಣ. ಈ ಆಸನದ ವಿನ್ಯಾಸದಿಂದಲೇ ಉದರದಲ್ಲಿ 'ತಟಾಕ' ವೆಂಬ ಮುದ್ರೆಯು ಉಂಟಾಗುತ್ತದೆ. ಈ ಮುದ್ರೆಯಲ್ಲಿ ಎರಡೂ ಕಡೆಯಿಂದ ಅಲೆಗಳಂತೆ ಹಿಂದಕ್ಕೆ ಹರಿಯುವ ಪ್ರಾಣಶಕ್ತಿಗಳ ಸಂಗಮವು ಉದರದಲ್ಲಿ ಆಗುತ್ತದೆ. ಆ ಸ್ಥಿತಿಯಲ್ಲಿ ವಾಯುವನ್ನು ರೇಚಕ ಮಾಡಿ ಹಣೆಯನ್ನು ಮಂಡಿಯ ಮೇಲೆ ಇರಿಸುವುದರಿಂದ, ಉದರವು ಕೃಶವಾಗುವುದು ಮಾತ್ರವಲ್ಲದೆ, ಶರೀರದ ಸ್ನಾಯುಗಳೆಲ್ಲವೂ ದೃಢಗೊಳ್ಳುತ್ತವೆ. ಅದನ್ನು ಅಭ್ಯಾಸ ಮಾಡುವವನಿಗೆ ಉತ್ತಮವಾದ ಆರೋಗ್ಯವು ಕೂಡಿ ಬರುತ್ತದೆ. ಅಷ್ಟೇ ಅಲ್ಲದೆ ಈ ಆಸನದ ಸ್ಥಿತಿ ಯಲ್ಲಿದ್ದುಕೊಂಡು ಪ್ರಾಣಾಯಾಮ ಮಾಡಿದರೆ, ಸುಲಭವಾಗಿ ಮನಸ್ಸು ಮತ್ತು ಪ್ರಾಣಗಳು ಮಧ್ಯನಾಡಿಯಾದ ಸುಷುಮ್ನೆಯ ದಿಕ್ಕಿನಲ್ಲಿ ಸಂಚರಿಸಲು ಸಮರ್ಥ ವಾಗುತ್ತವೆ. ಅದರಿಂದ ಶರೀರದಲ್ಲಿ ಧ್ಯಾನಕ್ಕೆ ಬಹಳ ಸಹಾಯಕವಾದ ಸ್ಥಿತಿ ಯುಂಟಾಗುತ್ತದೆ.

ಇವು ಹಲವು ಮುಖ್ಯವಾದ ಆಸನಗಳ ಒಳಸೂಕ್ಷ್ಮಗಳು. ಇದೇ ರೀತಿ ಯೋಗವು ಕಂಡ ಶರೀರ ರಹಸ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಇತರ ಆಸನ ಗಳ ಹಿಂದಿರುವ ವೈಜ್ಞಾನಿಕ ಅಂಶಗಳನ್ನು ನಾವು ತಿಳಿಯಬೇಕು. ಅವುಗಳೆಲ್ಲವನ್ನೂ ಇಲ್ಲಿ ವಿವರಿಸಹೋಗದೆ, ಆಸನಗಳಲ್ಲಿ ಪ್ರಾಣಾಯಾಮದ ಸ್ಥಾನ ಮತ್ತು ವಿಧಾನ ವನ್ನು ಮತ್ತು ಮನಸ್ಸಿನ ಪಾತ್ರವನ್ನೂ ಕುರಿತು ಕೆಲವು ವಿವರಗಳನ್ನು ಲೇಖಿಸುತ್ತೇವೆ

ಆಸನದಲ್ಲಿ ಪ್ರಾಣಾಯಾಮದ ಸ್ಥಾನವು ಬಹಳ ಹಿರಿದಾದುದು. ನಾವು ಈಗಾಗಲೇ ಸೂಚಿಸಿದಂತೆ, ಸರಿಯಾಗಿ ಅಭ್ಯಾಸ ಮಾಡಿದಾಗ ಆಸನದ ಸ್ಥಿತಿಯೇ ಸಾಧಕನಿಗೆ ಅದರ ಫಲವನ್ನು ಉಂಟುಮಾಡಲು ಸಾಕಾಗಿರುತ್ತದೆ. ಅದು ವ್ಯವಸ್ಥಿತವಾದ ಪ್ರಾಣಾಯಾಮದೊಡನೆ ಕೂಡಿದಾಗ, ಅದರ ಫಲವು ಎಷ್ಟೋ ಮಡಿ ಅಧಿಕವಾಗಿರುತ್ತದೆ. ವಾಸ್ತವದಲ್ಲಿ ಉಸಿರಾಟವು ಶರೀರದಲ್ಲಿ ನಿರಂತರವಾಗಿ ನಡೆಯುತ್ತಿರುವುದರಿಂದಲೇ ಶರೀರದ ರಹಸ್ಯವರಿತು ಮಾಡಿದ ಆಸನವು ತನ್ನ ಪರಿಣಾಮವನ್ನು ತೋರಿಸುತ್ತದೆ. ಆ ಉಸಿರಾಟವನ್ನೇ ಕ್ರಮವರಿತು ಮಾಡಿದಾಗ, ಅದು ತನ್ನ ಪ್ರಭಾವಸರ್ವಸ್ವವನ್ನೂ ಪ್ರಕಟಗೊಳಿಸುತ್ತದೆ. ಪ್ರಾಣಾಯಾಮವಿಲ್ಲದ ಆಸನವು ನಿಷ್ಫಲವಲ್ಲದಿದ್ದರೂ, ಮಂದ ವೇಗವುಳ್ಳದು; ಪ್ರಾಣಾಯಾಮ ಸಹಿತವಾದ ಆಸನವು ತೀವ್ರ ವೇಗವಾಗಿರುವುದು ಮಾತ್ರವಲ್ಲದೆ, ಸಾಧಕನಿಗೆ ಯೋಗಮಾರ್ಗವನ್ನು ತೆರೆದು ಕೊಡುವಂತಹದ್ದು. ಆದುದರಿಂದ ನಿಜವಾಗಿಯೂ ಯೋಗಾಭ್ಯಾಸ ಮಾಡುವವರು ಪ್ರಾಣಾಯಾಮದ ಸೂಕ್ಷ್ಮಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಆಸನವನ್ನೂ ಸಾಧಿಸಬಯಸಬೇಕು.

ಈ ಪ್ರಾಣಾಯಾಮದ ಪಾತ್ರವನ್ನು ಒಂದು ಉಪಮಾನದ ಸಹಾಯದಿಂದ ವರ್ಣಿಸಬಹುದು. ಒಂದು ಚೆನ್ನಾಗಿ ಮಾಡಿದ ಯಂತ್ರವಿದೆಯೆನ್ನೋಣ. ಯಂತ್ರದ ಭಿನ್ನ ವಿಭಿನ್ನ ಭಾಗಗಳೆಲ್ಲವೂ ಪರಸ್ಪರ ಸಂಬಂಧದಿಂದ ಕೂಡಿ, ತಮ್ಮ ತಮ್ಮ ಕೆಲಸವನ್ನು ಮಾಡಬೇಕಾದರೆ ಒಂದು ಚಾಲಕ ಶಕ್ತಿ ಬೇಕು. ಆ ಶಕ್ತಿಯು ಯಂತ್ರದ ಮೂಲಕ ಹರಿದಾಗ ತಾನೆ ಅವೆಲ್ಲವೂ ತಮ್ಮ ತಮ್ಮ ನಿರ್ದಿಷ್ಟ ಕೆಲಸಗಳನ್ನು ಮಾಡುತ್ತವೆ. ಉಸಿರೇ ಈ ಶರೀರ ಯಂತ್ರದ ಏಕ ಮಾತ್ರ ಚಾಲಕಶಕ್ತಿ. ಅದು ಶರೀರದ ಎಲ್ಲ ಭಾಗಗಳನ್ನೂ ಮುಟ್ಟುತ್ತದೆ. ಪ್ರತಿಯೊಂದು ಸ್ನಾಯುವಿನಲ್ಲಿಯೂ ಹರಿಯುತ್ತದೆ. ಅದು ಹಾಗೆ ಮಾಡುವುದರಿಂದಲೇ ರಕ್ತಸಂಚಾರವೇ ಮುಂತಾದ ಶರೀರದ ಯಾವತ್ತೂ ಕಾರ್ಯಗಳು ನಡೆಯುತ್ತವೆ, ಅದರಿಂದಲೇ ಜೀವನಾಧಾರಭೂತವಾದ ಚಕ್ರಗಳು ಸಚೇತಗೊಂಡು ಶರೀರ ಯಂತ್ರವನ್ನು ನಿಯಮಿಸುತ್ತವೆ. ಮನುಷ್ಯನು ತನ್ನ ಅಂತರಾತ್ಮವನ್ನು ಹುಡುಕಲು ಬಯಸಿದರೆ, ಆಗಲೂ ಸಹ ಅವನಿಗೆ ಅದನ್ನು ಬಿಟ್ಟರೆ ಬೇರೆ ಸಾಧನವಿಲ್ಲ. ಅಂತಹ ಪ್ರಾಣಶಕ್ತಿಯನ್ನು ವಶಕ್ಕೆ ತಂದುಕೊಂಡು, ಅದರ ಸಹಾಯದಿಂದ ಮನುಷ್ಯನ ಅಂತರಾತ್ಮದಲ್ಲಿರುವ ಸ್ಥಿತಿಗಳನ್ನೂ ಮತ್ತು ಸತ್ಯಗಳನ್ನೂ ಕರಗತ ಮಾಡಿಕೊಳ್ಳುವ ವಿಧಾನವೇ ಪ್ರಾಣಾಯಾಮ. ಈ ಯೋಗದ ನಾಲ್ಕನೆಯ ಅಂಗವನ್ನು ಕುರಿತು ಮುಂದೆ ವಿಸ್ತಾರವಾಗಿ ಹೇಳುತ್ತೇವೆ. ಸಧ್ಯದಲ್ಲಿ ಆಸನ ಸಂಬಂಧಿಸಿದಂತೆ ಅದನ್ನು ಕುರಿತು ವಿವೇಚಿಸುತ್ತೇವೆ. ಪ್ರಾಣಾಯಾಮವು ರೇಚಕ ಪೂರಕ ಕುಂಭಕಗಳೆಂಬ ಮೂರು ಭಾಗಗಳಿಂದ ಕೂಡಿರುತ್ತದೆ. ರೇಚಕವೆಂದರೆ ಉಸಿರನ್ನು

ಹೊರಗೆ ಬಿಡುವುದು. ಪೂರಕವೆಂದರೆ ಉಸಿರನ್ನು ತುಂಬುವುದು. ಕುಂಭಕವೆಂದರೆ ಅದನ್ನು ತಡೆಯುವುದು, ಕುಂಭಕವೆಂಬ ಪದವು ಕುತೂಹಲಕಾರಿಯಾಗಿರುತ್ತದೆ. ಹರಿಯುವುದು ನೀರಿನ ಸ್ವಭಾವ. ಅದನ್ನೇ ಒಂದು ಕುಂಭದಲ್ಲಿಟ್ಟರೆ ಅದೂ ತನ್ನ ಸ್ವಭಾವವನ್ನು ಕಳೆದುಕೊಂಡು, ನಿಶ್ಚಲವಾಗಿರುತ್ತದೆ. ಉಸಿರೂ ಸಹ ನಿರಂತರವಾಗಿ ಚಲಿಸುವ ಶಕ್ತಿ. ಅದನ್ನು ಚಲಿಸದಂತೆ ತಡೆ ಹಿಡಿಯುವುದೇ ಕುಂಭಕ. ಉಸಿರಾಟವು ಪ್ರಾಣಾಪಾನಗಳ ಕ್ರಿಯೆಯ ರೂಪವಾಗಿರುತ್ತದೆ. ಇವೆರಡರಲ್ಲಿ ಪ್ರಾಣವು ಪಿಂಗಳಾನಾಡಿಯಲ್ಲಿಯೂ ಅಪಾನವು ಇಡಾನಾಡಿಯಲ್ಲಿಯೂ ಆಡುತ್ತದೆ. ಪ್ರಾಣವಾಯುವು ಒಂದು ನಿರ್ದಿಷ್ಟ ಕಾಲದವರೆಗೆ ತನ್ನ ಕೆಲಸವನ್ನು ಮಾಡಿದ ನಂತರ ಅಪಾನವಾಯುವು ತನ್ನ ವ್ಯಾಪಾರವನ್ನು ಆರಂಭಿಸುತ್ತದೆ. ಅದಾದ ನಂತರ ಪ್ರಾಣವಾಯುವು ಕ್ರಿಯಾಶೀಲವಾಗುತ್ತದೆ. ಆದುದರಿಂದಲೇ ಉಸಿರಾಟವು ಎಡ ಹೊಳ್ಳೆಯಲ್ಲಾಗುತ್ತಿರುವಾಗ, ಬಲ ಹೊಳ್ಳೆಯಲ್ಲಿ ಉಸಿರಾಟವಿರುವುದಿಲ್ಲ. ಬಲ ಹೊಳ್ಳೆಯಲ್ಲಿ ಆಗುತ್ತಿರುವಾಗ ಅದು ಎಡ ಹೊಳ್ಳೆಯಲ್ಲಿ ಆಡುವುದಿಲ್ಲ. ಒಂದು ಹೊಳ್ಳೆಯಿಂದ ಇನ್ನೊಂದು ಹೊಳ್ಳೆಗೆ ಪರಿವರ್ತನವಾಗುವಾಗ ಮಧ್ಯೆ ಸ್ವಲ್ಪ ಕಾಲ ಅದು ಸುಷುಮ್ನಾ ನಾಡಿಯಲ್ಲಿ ಆಡುತ್ತದೆ. ಈ ರೀತಿ ಪ್ರಾಣಾಪಾನ ಶಕ್ತಿಗಳು ಇಡಾಪಿಂಗಳೆಗಳಲ್ಲಿ ಪರ್ಯಾಯವಾಗಿ ಆಡುತ್ತಾ ಜೀವನನ್ನು ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಒಯ್ಯುತ್ತವೆ. ಅವುಗಳ ನಿರೋಧವೇ ಪ್ರಾಣಾಯಾಮ.

ಪೂರಕ ಕುಂಭಕ ರೇಚಕ ರೂಪವಾದ ಪ್ರಾಣಾಯಾಮವನ್ನು ಯೋಗ ಶಾಸ್ತ್ರವು ವಿಶದವಾಗಿ ಹೇಳುತ್ತದೆ. ಪೂರಕವು ಒಂದು ಮಾತ್ರಾಕಾಲವೂ, ಕುಂಭಕವು ನಾಲ್ಕು ಮಾತ್ರಾ ಕಾಲವೂ ಮತ್ತು ರೇಚಕವು ಎರಡು ಮಾತ್ರಾ ಕಾಲವೂ ಆಗಿರಬೇಕು. ಪದ್ಮಾಸನದಲ್ಲಿ ಕುಳಿತು ಎರಡು ಮಂಡಿಗಳನ್ನೂ ಬಲಗೈಯಿಂದ ಪ್ರದಕ್ಷಿಣವಾಗಿ ಸುತ್ತಿಸಿ ಚಿಟಿಕೆ ಹೊಡೆಯುವ ಕಾಲವನ್ನು ಯೋಗವು ಮಾತ್ರೆ ಎಂದು ಗಣಿಸುತ್ತದೆ. ಆಧುನಿಕ ಭಾಷೆಯಲ್ಲಿ ಅದು ಮೂರು ನಾಲ್ಕು ಸೆಕೆಂಡುಗಳಷ್ಟಾಗುತ್ತದೆ. ಪೂರಕ ಕುಂಭಕ ರೇಚಕಗಳನ್ನು ಕ್ರಮವಾಗಿ 8 : 32 : 16, 12 : 48 : 24 ಅಥವಾ 16 : 64 : 32 ಮಾತ್ರೆಗಳ ಕಾಲ ಮಾಡಿದರೆ ಒಂದು ಪ್ರಾಣಾಯಾಮವಾಗುತ್ತದೆ. ಪೂರಕವನ್ನು ಇಡಾನಾಡಿಯಲ್ಲಿಯೂ, ಕುಂಭಕವನ್ನು ಸುಷುಮ್ನಾ ನಾಡಿಯಲ್ಲಿಯೂ ಮತ್ತು ರೇಚಕವನ್ನು ಪಿಂಗಳಾ ನಾಡಿಯಲ್ಲಿಯೂ ಮಾಡಬೇಕು. ಪ್ರಾಣಾಯಾಮವನ್ನು ಇಡಾನಾಡಿಯಿಂದ ಆರಂಭಿಸಿ ಎಷ್ಟು ಸಲ ಮಾಡುತ್ತಾನೆಯೋ ಅಷ್ಟೇ ಸಲ ಪಿಂಗಳಾ ನಾಡಿಯಿಂದ ಮಾಡಬೇಕು. ಒಂದು ಹೊಳ್ಳೆಯಲ್ಲಿ ಉಸಿರು ಆಡುತ್ತಿರುವಾಗ ಮತ್ತೊಂದು ಹೊಳ್ಳೆಯಲ್ಲಿ ಅದು ಆಡುವಂತೆ ಮಾಡುವುದು ಸುಲಭವಲ್ಲ. ಅದು ಶರೀರದ ಮರ್ಮವನ್ನರಿತು ಅಭ್ಯಾಸದಿಂದ ಸಾಧಿಸುವ ವಿಷಯ.

ಆಸನದ ಸ್ಥಿತಿಯಲ್ಲಿ ಉಳಿತು ಮೇಲೆ ಹೇಳಿದಂತೆ ಪ್ರಾಣಾಯಾಮ ಮಾಡಿದಾಗ ಶರೀರದಲ್ಲಿ ಆಸನದ ಪ್ರಭಾವವು ಪೂರ್ಣವಾಗಿ ಉಂಟಾಗುತ್ತದೆ. ಅದರೊಡನೆ ಮನಸ್ಸಿನ ವ್ಯಾಪಾರವೂ ಸೇರಿದಾಗ, ಆಸನವು ಕೇವಲ ಶಾರೀರಕವಾದ ಕ್ರಿಯೆಯಾಗಿ ಉಳಿಯದೆ ಯೋಗಮಾರ್ಗವನ್ನು ತೆರೆದುಕೊಡಲು ಸಮರ್ಥವಾದ ಯೋಗಾಂಗವಾಗುತ್ತದೆ, ಮನಸ್ಸಿನಲ್ಲಿ ಏನನ್ನು ಸಂಕಲ್ಪ ಮಾಡುತ್ತಾನೆಯೋ ಮತ್ತು ಶರೀರದಲ್ಲಿ ಯಾವ ಸ್ಥಾನ (ಚಕ್ರ) ದಲ್ಲಿ ಅದನ್ನು ಏಕಾಗ್ರ ಮಾಡುತ್ತಾನೆಯೋ ಅದಕ್ಕನುಗುಣವಾಗಿ ಆಸನದ ಸ್ಥಿತಿಯಲ್ಲಿ ಶರೀರದ ಒಳ ಅವಯವ ಗಳೆಲ್ಲವೂ ವ್ಯಾಪಾರ ಮಾಡುತ್ತವೆ. ಆ ಕುಶಲತೆಯನ್ನು ಸಾಧನೆಯಿಂದ ಸಂಪಾದಿಸಿದಾಗ, ಆಸನವು ಬರೀ ವ್ಯಾಯಾಮದ ವಿಷಯವಲ್ಲ, ಅದು ಯೋಗದ ಒಂದು ಮುಖ್ಯವಾದ ಅಂಗ ಎಂಬುದು ತಿಳಿವಳಿಕೆಗೆ ಬರುತ್ತದೆ.

ಶ್ರೀರಂಗಸದ್ಗುರವೇ ನಮಃ

ಭಾರತೀಯರ ಹಬ್ಬಹರಿದಿನಗಳು ೨೭

ವೈಶಾಖ ಮಾಸದ ಹಬ್ಬ ಹರಿದಿನಗಳು—
ಅಕ್ಷಯ ತೃತೀಯಾ —4

ಅಕ್ಷಯ ತೃತೀಯಾ ಪರ್ವದಲ್ಲಿ ಆಚರಿಸಬೇಕಾದ ವಿಧಿಗಳಲ್ಲಿ ಗಂಗಾಸ್ನಾನದ ಪ್ರಾಮುಖ್ಯವೇನು ? ಆ ತೀರ್ಥದ ಮಹಿಮೆಯ ವಿಷಯದಲ್ಲಿ ಶಾಸ್ತ್ರಗಳೂ, ಇತಿಹಾಸಗಳೂ, ಮತ್ತು ಪ್ರಾಚೀನ ಹಾಗೂ ಆಧುನಿಕ ವೈದ್ಯರೂ ಏನು ಹೇಳುತ್ತಾರೆ ? ಎಂಬುದನ್ನು ಈ ಲೇಖನ ಮಾಲೆಯ ಹಿಂದಿನ ಪ್ರಬಂಧದಲ್ಲಿ ಗಮನಿಸಿದ್ದೇವೆ. ಅದರ ಅದ್ಭುತವಾದ ಗುಣಗಳನ್ನು ರೋಗಗಳನ್ನು ನಿವಾರಿಸುವ ಸಾಮರ್ಥ್ಯ ಮತ್ತು ಪಾಪಗಳನ್ನು ಪರಿಹರಿಸುವ ಸಾಮರ್ಥ್ಯ — ಎಂದು ವಿಶ್ಲೇಷಣೆ ಮಾಡಿ ಅವುಗಳ ವಿವೇಚನೆಯನ್ನೂ ಅಲ್ಲಿ ಪ್ರಸ್ತಾಪಿಸಿದ್ದೆವು. ಆ ಪರಿಶೀಲನೆಯನ್ನು ಈ ಲೇಖನದಲ್ಲಿ ಮುಂದರಿಸುತ್ತೇವೆ.

(i) ಗಂಗೆಯ ರೋಗನಿವಾರಣಾ ಸಾಮರ್ಥ್ಯದ ವಿವೇಚನೆ :-

ಗಂಗಾತೀರ್ಥದಲ್ಲಿ ಅನೇಕ ರೋಗಗಳನ್ನು ಗುಣಪಡಿಸುವ ಸಾಮರ್ಥ್ಯವಿದೆ ಯೆಂದು ಪ್ರಯೋಗಗಳಿಂದ ಸಿದ್ಧಪಟ್ಟಿದೆ ಎಂದು ಅನೇಕ ಪ್ರಾಚೀನ ಮತ್ತು ಅರ್ವಾಚೀನ ವೈದ್ಯರು ಘೋಷಣೆ ಮಾಡಿದ್ದಾರೆ. ಆದರೆ ಅವರ ಅಭಿಪ್ರಾಯವನ್ನೂ ಆಕ್ಷೇಪಿಸುವ ವಾದಗಳನ್ನೂ ಪರಿಶೀಲಿಸಿ ನಾವು ವಿಷಯದ ತೀರ್ಮಾನಕ್ಕೆ ಬರಬೇಕಾಗಿದೆ.

"ಗಂಗಾನದಿಯು ರೋಗನಿವಾರಕವಲ್ಲ, ರೋಗ ಕಾರಕ" ಎಂಬ ವಾದ :— ಗಂಗಾನದಿಯು ಚೊಕ್ಕಟವಾಗಿರುವುದು ಅದು ಹುಟ್ಟುವ ಜಾಗದಲ್ಲಿ ಮತ್ತು ಅಲ್ಲಿಂದ ಮುಂದೆ ಕೆಲವು ಕಿಲೋಮೀಟರುಗಳ ಪ್ರದೇಶದಲ್ಲಿ ಮಾತ್ರ. ಉಳಿದ ಎಲ್ಲಾ ಕಡೆಗಳಲ್ಲೂ ಅದು ಕಶ್ಮಲರಸಾಯನದ ವಾಹಿನಿಯೇ ಆಗಿದೆ. "ಅದರ ಹೊಲಸು ತುಂಬಿದ ನೀರುಗಳು ತೆರೆದ ಚರಂಡಿಗಳಾಗಿವೆ. ದುರ್ವಾಸನೆಯ ಗಟಾರಗಳಾಗಿವೆ, ರೋಗಾಣುಗಳ ಗೋಡೌನುಗಳಾಗಿವೆ."

ಇದಕ್ಕೆ ಕಾರಣಗಳು ಅನೇಕ. ಕಾರ್ಖಾನೆಗಳಿಂದ ಅಪಾಯಕರವಾದ ರಸಾಯನಿಕ ದ್ರವ್ಯಗಳು ಅದಕ್ಕೆ ಹೇರಳವಾಗಿ ಬಂದು ಸೇರುತ್ತವೆ. ನದೀ ತೀರದಲ್ಲಿ ಮಲಮೂತ್ರ ವಿಸರ್ಜನೆ ನಡೆಯುತ್ತದೆ. ಆ ನೀರಿನಲ್ಲಿ ಪಶುಗಳನ್ನು ತೊಳೆಯುತ್ತಾರೆ. ಅಲ್ಲಿ ಪರ್ವ ಕಾಲಗಳಲ್ಲಿ ಸಾವಿರಾರು ಜನರು ಏಕಕಾಲದಲ್ಲಿ ಒಂದೇ ಜಾಗದಲ್ಲಿ ಸ್ನಾನ ಮಾಡಿ ತಮ್ಮ ದೇಹಗಳ ಕೊಳಕನ್ನು ಅದಕ್ಕೆ ಸೇರಿಸುತ್ತಾರೆ. ಕಾಶಿ ಮುಂತಾದ ಕ್ಷೇತ್ರಗಳಲ್ಲಿ ಅರ್ಧ ಸುಟ್ಟ ಹೆಣಗಳು ಅದರಲ್ಲಿ ಧಾರಾಳವಾಗಿ ಅರ್ಪಿಸಲ್ಪಟ್ಟು ನೀರನ್ನು ಕೆಡಿಸುತ್ತವೆ. ಆದ್ದರಿಂದ ಗಂಗೆಯು ನಮ್ಮ ದೇಶದ ಅತ್ಯಂತ ಕಲುಷಿತವಾದ ನದಿಗಳಲ್ಲಿ ಒಂದಾಗಿದೆ. ಟೈಫಾಯಿಡ್, ಕಾಲರಾ, ವಾಂತಿಭೇದಿ, ಹೆಪಟೈಟಿಸ್, ಹೊಟ್ಟೆಯಲ್ಲಿ ಹುಳು ಇತ್ಯಾದಿ ವ್ಯಾಧಿಗಳ ರೋಗಾಣುಗಳು ಅದರ ಸೇವನೆಯಿಂದ ಹರಡುತ್ತವೆ– ಎಂದು ಗಾಂಧೀ ಶಾಂತಿ ಪೀಠವು ಒಂದು ಹೇಳಿಕೆಯನ್ನು ಹೊರಡಿಸಿದೆ. "ಗಂಗಾನದಿಯ ನೀರು ಮಾನವ ಉಪಯೋಗಕ್ಕೆ ಅನರ್ಹ" ಎಂದು 1976ರಲ್ಲಿ ವೈದ್ಯರು ನಡೆಸಿದ ಒಂದು ಸಂಶೋಧನೆಯಲ್ಲಿ ತಿಳಿದುಬಂದಿದೆ. ವೈದ್ಯಕೀಯ ಪರೀಕ್ಷೆಯಿಂದ ಸಿದ್ಧವಾಗಿರುವ ಈ ಅಭಿಪ್ರಾಯವನ್ನು ನಾವು ಅಲ್ಲಗಳೆಯಲಾಗುವುದಿಲ್ಲ. ಆದರೆ "ಪರೀಕ್ಷೆ ಮಾಡುತ್ತಿರುವಾಗ ತತ್ಕಾಲದಲ್ಲಿ ನೀರಿನಲ್ಲಿ ಕಾಲರಾ ಕೀಟಾಣುಗಳು ಹೇರಳವಾಗಿರುವುದು ನಮಗೂ ಕಂಡು ಬಂದಿದೆ. ಆದರೆ ಆರುಗಂಟೆಗಳ ನಂತರ ಆ ಎಲ್ಲಾ ಕೀಟಾಣುಗಳೂ ಸತ್ತು ಹೋಗಿರುವುದೂ ನಮ್ಮ ಗಮನಕ್ಕೆ ಬಂದಿದೆ" ಎಂಬ ವೈದ್ಯರ ಹೇಳಿಕೆಯೂ ಇದೆ. ಇವು ಬೇರೆಬೇರೆ ಸಮಯಗಳಲ್ಲಿ ಬಂದಿರುವ ಅಭಿಪ್ರಾಯಗಳು. ಕಾಲಕಾಲಗಳಲ್ಲಿ ಆ ನೀರಿನ ಯೋಗ್ಯತೆಯನ್ನು ನಾವು ವೈಜ್ಞಾನಿಕವಾಗಿ ಪರೀಕ್ಷಿಸುತ್ತಾ ನಿರ್ಣಯವನ್ನು ಹೊಂದಬೇಕಾಗಿದೆ. ಈ ಸಂದರ್ಭದಲ್ಲಿ ಸಾಮಾನ್ಯವಾಗಿ ನದಿಗಳಿಗೆಲ್ಲಾ ಇರುವ ಪ್ರಕೃತಿದತ್ತವಾದ ಶುದ್ಧೀಕರಣ ಸಾಮರ್ಥ್ಯವನ್ನೂ ಗಮನಿಸಬೇಕು.

ನದಿಗಳಿಗಿರುವ ಶುದ್ಧೀಕರಣ ಸಾಮರ್ಥ್ಯ :

ಸಾಮಾನ್ಯವಾಗಿ ತಮ್ಮಲ್ಲಿರುವ ಕೊಳಕನ್ನು ತಾವೇ ಶುದ್ಧಿ ಮಾಡಿಕೊಳ್ಳುವ ಶಕ್ತಿಯು ನದಿಗಳಿಗೆ ಪ್ರಕೃತಿದತ್ತವಾಗಿ ಬಂದಿದೆ. ಇದನ್ನು ವಿಜ್ಞಾನಿಗಳು ಹೀಗೆ ವಿವರಿಸುತ್ತಾರೆ : [1]ನದಿಗಳಲ್ಲಿ ಅದನ್ನು ಶುದ್ಧಿ ಮಾಡುವ ಬ್ಯಾಕ್ಟೀರಿಯಾಗಳೂ ಇರುತ್ತವೆ. ಬ್ಯಾಕ್ಟೀರಿಯಾಗಳಲ್ಲಿ ಏರೋಬ್ ಮತ್ತು ಏನೇರೋಬ್ ಎಂದು ಎರಡು ಬಗೆಗಳು.

---

1) ಹೊಲಸು ತುಂಬಿದ ನಮ್ಮ ನದಿಗಳು B.S.N.

ಇವುಗಳಲ್ಲಿ ಮೊದಲನೆಯುವು ಆಮ್ಲಜನಕವನ್ನು ಸೇವಿಸಿ ಬದುಕುತ್ತವೆ. ಎರಡನೆಯುವು ಆಮ್ಲಜನಕವಿಲ್ಲದೆ ಪ್ರಾಣವಾಯುವನ್ನೇ ದ್ವೇಷಿಸಿ ಬದುಕುತ್ತವೆ. ಎನೇರೋಬ್ ಬ್ಯಾಕ್ಟೀರಿಯಾಗಳು ಪ್ರವಾಹದ ತಳದಲ್ಲಿ ಇರುವ ಘನ ಪದಾರ್ಥಗಳನ್ನು ಧ್ವಂಸ ಮಾಡಿದರೆ, ಏರೋಬ್ ಬ್ಯಾಕ್ಟೀರಿಯಾಗಳು ನೀರಿನ ಮೇಲ್ಮೈಯಲ್ಲಿರುವ ಪದಾರ್ಥಗಳನ್ನು ನಾಶಮಾಡುತ್ತವೆ. ಈ ಬ್ಯಾಕ್ಟೀರಿಯಾಗಳು ನೀರಿನ ಹೊಲಸಿನಲ್ಲಿರುವ ಸಾವಯುವ ಪದಾರ್ಥಗಳನ್ನೂ ಭಕ್ಷಿಸುತ್ತವೆ. ಹಾಗೇ ಬ್ಯಾಕ್ಟೀರಿಯಾಗಳ ದೇಹದೊಳಗೆ ಸೇರಿದಾಗ ಆ ಸಾವಯುವ ದ್ರವ್ಯಗಳು ನಿರವಯುವ ದ್ರವ್ಯಗಳಾಗುತ್ತವೆ. ಅವು ಕೊಳೆಯುವುದಿಲ್ಲ. ಅಪಾಯುವನ್ನುಂಟುಮಾಡುವುದಿಲ್ಲ. ಇಷ್ಟೇ ಅಲ್ಲದೆ ನೀರಿನಲ್ಲಿರುವ ಕೆಲವು ಏಕಾಣು ಜೀವಿಗಳು ನೀರಿನ ಹೊಲಸಿನಲ್ಲಿರುವ ರೋಗಾಣುಗಳನ್ನು ನಾಶಪಡಿಸುತ್ತವೆ. ಏರೋಬ್ ಬ್ಯಾಕ್ಟೀರಿಯಾಗಳು ತಮಗೆ ಆಹಾರವಾಗಿ ನೀರಿನಲ್ಲಿರುವ ಆಮ್ಲಜನಕವನ್ನೂ ಅಪಹರಿಸಿಬಿಡುತ್ತವೆಯಲ್ಲಾ? ಅದರಿಂದ ಅಪಾಯುವಿಲ್ಲವೇ? ಎಂದರೆ ಅವು ಹಾಗೆ ಅಪಹರಿಸಿದರೂ ನದಿಯು ವಾತಾವರಣದಲ್ಲಿರುವ ಆಮ್ಲಜನಕವನ್ನು ಪಡೆದು ಆ ನಷ್ಟವನ್ನು ತುಂಬಿಕೊಳ್ಳುತ್ತದೆ. ಇದಲ್ಲದೆ ನೀರಿನಲ್ಲಿರುವ ಪಾಚಿ ಸಸ್ಯಗಳು ದ್ಯುತಿ ಸಂಶ್ಲೇಷಣೆ (Photosynthesis) ಕ್ರಿಯೆಯಿಂದ ಆಮ್ಲಜನಕವನ್ನು ತಯಾರಿಸಿ ಆ ಬ್ಯಾಕ್ಟೀರಿಯಾಗಳಿಗೆ ದಾನ ಮಾಡುತ್ತವೆ.

ನದಿಯಲ್ಲಿ ಸಾವಯುವ ಪದಾರ್ಥಗಳು ಬರಿದಾದರೆ ಆಗ ಏರೋಬ್‌ಗಳಿಗೆ ಆಹಾರದ ಕೊರತೆಯುಂಟಾಗಿ ಅವುಗಳ ಸಂಖ್ಯೆ ಕಡಿಮೆ ಉಂಟಾಗುತ್ತದೆ. ಆಗ ನದಿಯು ತನ್ನ ವಾತಾವರಣದಿಂದ ಆಮ್ಲಜನಕದ ಪ್ರಮಾಣವನ್ನು ಹೆಚ್ಚಿಸಿಕೊಳ್ಳುತ್ತದೆ. ಆದರೆ ನದಿಯಲ್ಲಿ ಹೊಲಸಿನ ಪ್ರಮಾಣವು ತುಂಬಾ ಹೆಚ್ಚಾದರೆ ಆಗ ಈ ಶುದ್ಧೀಕರಣ ಸಾಮರ್ಥ್ಯವು ಕುಂಠಿತವಾಗುತ್ತದೆ. ಏಕೆಂದರೆ ಏರೋಬ್ ಬ್ಯಾಕ್ಟೀರಿಯಾಗಳು ಹೊಲಸಿನೊಂದಿಗೆ ಬರುವ ಅತಿ ಹೆಚ್ಚಾದ ಸಾವಯುವ ಪದಾರ್ಥಗಳನ್ನು ಭಕ್ಷಿಸಿ ಸಂಖ್ಯೆಯಲ್ಲಿ ಮಿತಿ ಮೀರಿ ಬೆಳೆದು ಆಮ್ಲಜನಕವನ್ನು ಖಾಲಿ ಮಾಡುತ್ತವೆ. ಇಷ್ಟು ದೊಡ್ಡ ಪ್ರಮಾಣದ ಆಮ್ಲಜನಕದ ನಷ್ಟವನ್ನು ನದಿಯು ತುಂಬಲಾರದು. ಆಗ ಆಮ್ಲಜನಕವು ಸಾಲದೆ ಏರೋಬ್‌ಗಳು ಮತ್ತು ರೋಗಾಣುನಾಶಕವಾದ ಏಕಕಣ ಜೀವಿಗಳು ಸಾಯುತ್ತವೆ. ಆಗ ಇಡೀ ನದಿಯು ಎನೇರೋಬ್‌ಗಳ ರಾಜ್ಯವಾಗುತ್ತದೆ. ಅವುಗಳಿಗೆ ಪುಷ್ಕಳವಾದ ಆಹಾರವೂ ದೊರೆಯುತ್ತದೆ. ಮೃತ್ಯುವಾದ ಆಮ್ಲಜನಕವೂ ಇಲ್ಲವಾಗಿದೆ. ಆದ್ದರಿಂದ ಅವು ನೀರಿನ ಮೇಲು ಮೈಗೆ ವೃದ್ಧಿ ಹೊಂದುತ್ತವೆ. ಇದಲ್ಲದೆ ಅವು ಹೈಡ್ರೋಜನ್ ಸಲ್ಫೈಡ್ ಎಂಬ ಕಪ್ಪು ಬಣ್ಣವನ್ನುಂಟುಮಾಡುವ ದುರ್ವಾಸನೆಯ ವಿಷಾನಿಲವನ್ನು ನೀರಿಗೆ ಬಿಟ್ಟು ನೀರನ್ನು ಕಪ್ಪಾಗಿಸುತ್ತವೆ. ಮತ್ತು ದುರ್ಗಂಧಭರಿತವನ್ನಾಗಿ ಮಾಡುತ್ತವೆ. ನದಿಯಲ್ಲಿರುವ ಸಸ್ಯಗಳನ್ನೂ ಸಾಯಿಸುತ್ತವೆ. ಸಾಕಾದಷ್ಟು ಆಮ್ಲಜನಕವು ದೊರೆಯದಿರುವುದರಿಂದ ನದಿಯಲ್ಲಿರುವ ಮೀನುಗಳೂ ಮರಣ ಹೊಂದುತ್ತವೆ. ಇಡೀ ನೀರು ಮಾಲಿನ್ಯದ ಮನೆಯಾಗುತ್ತದೆ.

ಇದು ಎಲ್ಲಾ ನದಿಗಳಲ್ಲೂ ಸಾಮಾನ್ಯವಾಗಿರುವ ಶುದ್ಧೀಕರಣ ಸಾಮರ್ಥ್ಯ.

ಸಂಸಾಸದಿಂಚು ಔಷಧಿ, ವನಸ್ಪತಿಗಳ ಮೇಲೆ ವಿಶೇಷವಾಗಿ ಹರಿದು ಬರುವುದರಿಂದ ಅವಳಲ್ಲಿ ಕ್ರಿಮಿನಾಶಕ ಸಾಮರ್ಥ್ಯ ಮತ್ತು ನೀರಿನ ಶುದ್ಧೀಕರಣದ ಸಾಮರ್ಥ್ಯ ಹೆಚ್ಚಾಗಿರಬಹುದು. ಆದರೂ ಮರ್ಯಾದೆ ಮೀರಿ ಅದಕ್ಕೆ ಕೊಳಕುಗಳನ್ನು ಸದಾ ತುಂಬುತ್ತಿದ್ದರೆ ಅದರ ಮೇಲ್ಕಂಡ ಶುದ್ಧೀಕರಣ ಸಾಮರ್ಥ್ಯವು ಕ್ಷೀಣಿಸಬಹುದು.

ನಾದದ ಪರಿಶೀಲನೆ :

ಆದರೆ ನಮ್ಮ ಅವಿವೇಕದಿಂದ ಗಂಗೆಯ ನೀರು ಮಿತಿ ಮೀರಿ ಕಶ್ಮಲಗೊಂಡು ರೋಗಾಣುಗಳ ಬೀಡಾಗಿ ಮಾಡಲ್ಪಡುತ್ತಿದ್ದರೂ ಗಂಗೆಯ ನೀರು ಸ್ವತಃ ರೋಗ ನಿವಾರಕ, ಆರೋಗ್ಯಕಾರಿ — ಎಂಬ ಮಾತು ಅಸತ್ಯವಾಗುವುದಿಲ್ಲ, ಅವಿವೇಕಿಗಳು ಅಮೃತವಾಗಿರುವ ಕ್ಷೀರಕ್ಕೆ ವಿಷವನ್ನು ಬೆರಸಿ ಕುಡಿದು ಪ್ರಾಣ ಕಳೆದು ಕೊಂಡರೆ ಕ್ಷೀರವು ಸ್ವತಃ ಅಮೃತಪ್ರಾಯವಾದುದು ಎಂಬ ಸತ್ಯಾಂಶಕ್ಕೆ ಅದರಿಂದ ಕುಂದೇನೂ ಇಲ್ಲವಷ್ಟೆ!

ನದಿಗಳಿಗೆ ಮಲಮೂತ್ರಗಳ ನೀರನ್ನು ಸೇರಿಸುವುದು ಮಹಾಪಾತಕ. ಅಷ್ಟೇ ಅಲ್ಲದೆ ಅವುಗಳಲ್ಲಿ ಸ್ನಾನಮಾಡುವಾಗ ನಮ್ಮ ದೇಹದ ಕೊಳಕುಗಳನ್ನೂ ಅವುಗಳಿಗೆ ಸೇರಿಸಬಾರದು. ಬೇರೆ ಕಡೆಯಲ್ಲಿ ನೀರಿನಿಂದ ಶರೀರದ ಕೊಳೆಗಳನ್ನು ತೊಳೆದುಕೊಂಡು ಶುದ್ಧವಾದ ದೇಹ ಮತ್ತು ಮನಸ್ಸುಗಳಿಂದ ಕೂಡಿದವರಾಗಿ ಭಗವಂತನ ಶ್ರೀಪಾದ ತೀರ್ಥವೆಂಬ ಭಾವನೆಯಿಂದ ನದಿಯಲ್ಲಿ ಅವಗಾಹನ ಮಾಡಬೇಕು. ಎಂದು ಸಾರುತ್ತಾ ನಮ್ಮ ಶಾಸ್ತ್ರಗಳು ನದೀಶುದ್ಧಿಗೆ ಕೊಟ್ಟಿರುವ ಮಹಾಮೌಲ್ಯವನ್ನು ನೆನೆದರೆ ನಮಗೆ ರೋಮಾಂಚನವಾಗುತ್ತದೆ ಜ್ಞಾನಿಗಳು ಹೇಳಿದ ಆದರ್ಶದಿಂದ ಜಾರಿ ಮಹಾನದಿಗೆ ಬಗೆಬಗೆಯ ಮಲಗಳನ್ನು ಸಂಕೋಚವಿಲ್ಲದೆ ಸೇರಿಸುತ್ತಿರುವ ನಮ್ಮ ದುರ್ಬುದ್ಧಿಗೆ ಧಿಕ್ಕಾರವನ್ನು ಹೇಳಬೇಕು. ನದಿಗಳಿಗೆ ಹೇಗಾದರೂ ಶುದ್ಧೀಕರಣ ಮಾಡಿಕೊಳ್ಳುವ ಸಾಮರ್ಥ್ಯವು ಪ್ರಕೃತಿದತ್ತವಾಗಿದೆಯಲ್ಲಾ — ಎಂದು ಅದರ ಪ್ರವಾಹಕ್ಕೆ ಯಾವುದೇ ರೀತಿಯ ಕೊಳಕನ್ನು ಬೆರೆಸುವುದೂ ಕೊಳಕು ಮನಸ್ಸಿನಿಂದ ಪ್ರೇರಿತವಾದ ಹ್ಯಾಪಾರವೇ ಸರಿ. ಅನಿವಾರ್ಯವಾಗಿ ಅದರಲ್ಲಿ ಸೇರುವ ಕೊಳಕನ್ನು ನದಿಯ ಪ್ರಕೃತಿ ದತ್ತವಾದ ಶಕ್ತಿಯು ಪರಿಹರಿಸಲಿ. ನಮ್ಮ ಕಡೆಯಿಂದ ಅವಕ್ಕೆ ಕೊಳಕನ್ನು ಸೇರಿಸುವ ಅಪಚಾರವಂತೂ ಆಗಬಾರದು. ಹೊಲಸಾಗಿರುವ ನದಿಗಳ ನೀರನ್ನು ವೈಜ್ಞಾನಿಕವಾಗಿ (ಅದರ ದೋಷಭಾಗವನ್ನು ಹೋಗಲಾಡಿಸಿ, ಗುಣಭಾಗವು ಕಳೆದು ಹೋಗದ ರೀತಿ ಯಲ್ಲಿ) ಸಂಸ್ಕರಿಸುವುದು ತಪ್ಪಲ್ಲ. ಇದಕ್ಕಾಗಿ ಧಾರಾಳವಾಗಿ ಅರ್ಥವ್ಯಯ ಮಾಡ ಬೇಕಾಗಿ ಬಂದರೂ ಅದರಿಂದ ಆರೋಗ್ಯದ ಮಹಾಲಾಭ ಉಂಟಾಗುವುದರಿಂದ ಅದನ್ನು ಅವಶ್ಯವಾಗಿ ಮಾಡಬೇಕು.

"ಗಂಗಾ ನದಿಗೆ ಗ್ರಾಮಸಾರದ ನೀರನ್ನು ಸೇರಿಸಬಾರದು, ಹೆಣಗಳನ್ನು ಎಸೆ ಯಬಾರದು ಎಂದು ಯಾರೋ ಹೇಳಿದರು. ಆಗ ಗಂಗಾಮಾತೆಯು ಅವರಿಗೆ ಕನಸಿ ನಲ್ಲಿ ಕಾಣಿಸಿಕೊಂಡು 'ನನ್ನ ಮಹಿಮೆಗೆ ಏಕೆ ಅಪಮಾನ ಮಾಡುತ್ತಿದ್ದೀಯೆ ? ನನಗೆ ಎಂತಹ ಮಲಪನ್ನಾದರೂ, ಎಷ್ಟೇ ಮಲವನ್ನಾದರೂ ಧ್ವಂಸಮಾಡುವ ಸಾಮರ್ಥ್ಯ

ಏದೆ. ಎನ್ನುವ ವಿಷಯದಲ್ಲಿ ನಿನಗೆ ನಂಬಿಕೆಯಿಲ್ಲವೆ ? ನನ್ನ ನೀರಿಗೆ ಹೆಣಗಳನ್ನು ಎಸೆಯಬಾರದು, ಕೊಳಕನ್ನು ಬೆರಸಬಾರದು ಎಂದು ಹೇಳಲು ನಿನಗೆ ಯಾವ ಅಧಿಕಾರವೂ ಇಲ್ಲ, ಎಂದು ಗದರಿಸಿಕೊಂಡಳು'' — ಎಂದು ಕಥೆಯನ್ನು ಕೆಲವರು ಹೇಳುವುದುಂಟು. ಈ ಕಥೆಯು ಸತ್ಯಾಂಶವು ವಿಚಾರಣೀಯ. ಆದರೆ ಮಹಾನದಿಯಲ್ಲಿ ನಾವು ಮಾಡಬೇಕಾದುದು ಪುಣ್ಯಸ್ನಾನವೇ ಹೊರತು ಮಲಾಪನಯನ ಸ್ನಾನವಲ್ಲ — ಎಂಬ ತತ್ತ್ವಕ್ಕೆ ಇದು ವಿರುದ್ಧವಾಗಿದೆ. ದೇವತೆಯಂತೆ ಪೂಜ್ಯವಾಗಿರುವ ಮಹಾನದಿಗೆ ದೇಹ ಮಲವನ್ನಾಗಲೀ, ಮನಸ್ಸಿನ ಮಲವನ್ನಾಗಲೀ, ಬೆರಸಬಾರದು — ಎಂಬುದು ಸಾಮಾನ್ಯ ಬುದ್ಧಿಗೂ ಅರ್ಥವಾಗುವ ವಿಷಯವಾಗಿದೆ. ದೇವತಾಪ್ರತಿಮೆಗಳಿಗೆ ಅಭಿಷೇಕ ಮಾಡುವಾಗ ಮೊದಲು ಮಲಾಪನಯನ ಸ್ನಾನವನ್ನು ಮಾಡಿಸಿ ಅನಂತರ ಪಂಚಾಮೃತ ಶುದ್ಧೋದಕ ಮುಂತಾದವುಗಳಿಂದ ಅಭಿಷೇಕ ಮಾಡುವ ವಿಧಿಯನ್ನು ನೋಡುತ್ತೇವೆ. ಇದನ್ನು ಗಮನಿಸಿದರೆ ದೇವತೆಯಂತಿರುವ ಮಹಾನದಿಯ ನೀರು ಕೊಳಕಾಗಿದ್ದರೆ ಅದನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ಅನಂತರ ಸೇವಿಸುವುದು ದೋಷವಾಗಿ ಕಾಣುವುದಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಗಂಗಾನದಿಯಲ್ಲಿ ಸ್ವತಃ ರೋಗ ಪರಿಹಾರಕವಾದ ಸಾಮರ್ಥ್ಯವು ವಿಶೇಷವಾಗಿದೆ. ಇದು ಪ್ರಯೋಗಗಳಿಂದ ಸಿದ್ಧಪಟ್ಟಿರುವ ವಿಷಯ. ದೈವದತ್ತವಾಗಿರುವ ಈ ಅನುಗ್ರಹದ ಲಾಭವನ್ನು ನಾವು ಪಡೆಯಬೇಕು. ಆದರೆ ಆ ಅಮೃತಕ್ಕೆ ವಿಷವನ್ನು ಪ್ರಯತ್ನ ಪೂರ್ವಕವಾಗಿ ಸೇರಿಸಿ, ದೈವಕ್ಕೂ, ಮತ್ತು ನದಿಯ ನೀರನ್ನು ಉಪಯೋಗಿಸುವ ಜೀವಿಗಳಿಗೂ ಅಪಚಾರ ಮಾಡುವುದು ಮಹಾಪಾತಕ. ಅದನ್ನು ವರ್ಜಿಸಬೇಕು. ಆ ಮಹಾನದಿಯ ದೈವದತ್ತವಾದ ನೈರ್ಮಲ್ಯವನ್ನು ನಾವು ಕಾಪಾಡಿ ನಮ್ಮ ನೈರ್ಮಲ್ಯವನ್ನು ಸಾಧಿಸಿಕೊಳ್ಳಬೇಕು.

ಶ್ರೀಮದ್ರಾಮಾಯಣ-೨೦
ಸೀತೆ

ಬಹಳ ದುಃಖಿತಳಾದ ತಾಯಿಯ ಅನುಮತಿಯನ್ನು ಪಡೆದು ರಾಮನು ಸೀತೆಯನ್ನು ಬೀಳ್ಕೊಡಲು ತನ್ನ ಮನೆಗೆ ಬರುತ್ತಾನೆ. ಆರಂಭದಲ್ಲಿ ಅವನ ಮನಸ್ಸಿನಲ್ಲಿ ಸೀತೆಯನ್ನು ತನ್ನೊಡನೆ ಕಾಡಿಗೆ ಕರೆದುಕೊಂಡು ಹೋಗುವ ಉದ್ದೇಶ ಇರುವುದಿಲ್ಲ. ಆದರೆ ಸೀತೆಯ ಪ್ರತಿಕ್ರಿಯೆಯು ಅವಳನ್ನು ಕಾಡಿಗೆ ಕರೆದುಕೊಂಡು ಹೋಗುವುದಲ್ಲದೆ ಬೇರೆ ಉಪಾಯವೂ ಅವನ ಮುಂದಿಲ್ಲದಂತೆ ಮಾಡುತ್ತದೆ. ವಿವಾಹದಲ್ಲಿ 'ಸಹಧರ್ಮಚರೀ ತವ' (ಇವಳು ನಿನ್ನ ಸಹಧರ್ಮಚಾರಿಣಿಯಾಗಿರುತ್ತಾಳೆ), 'ಛಾಯೇವಾನುಗತಾ ಸದಾ' (ಇವಳು ನೆರಳಿನಂತೆ ನಿನ್ನನ್ನು ಹಿಂಬಾಲಿಸುತ್ತಾಳೆ) ಮುಂತಾದ ತಂದೆಯ ಮಾತುಗಳನ್ನು ನಿಜಮಾಡುತ್ತಾ ಅವಳು ಪತಿಯೊಡನೆ ಕಾಡಿಗೆ ಹೋಗಲೇಬೇಕೆಂದು

ಆಗ್ರಹ ಮಾಡುತ್ತಾಳೆ. ವನಜೀವನದ ಕ್ಲೇಶಗಳನ್ನು ಸ್ವಲ್ಪವೂ ಲೆಕ್ಕಿಸದೆ ಬಹಳ ಸುಖದಿಂದ ಬೆಳೆದ ಅವಳು ಕಾಡಿಗೆ ಹೋಗಲು ಆಗ್ರಹ ಮಾಡುವುದು ರಾಮನಿಗೆ ಸಹ ಅಚ್ಚರಿಯುಂಟುಮಾಡಿರಬೇಕು. ಅವನು ಅವಳ ಧರ್ಮಬುದ್ಧಿಗೆ ಮತ್ತು ಅವಳ ಮನೋದಾರ್ಢ್ಯಕ್ಕೆ ಸೋಲುತ್ತಾನೆ. ಕಡೆಗೆ ಸಂತೋಷದಿಂದಲೇ ಅವಳಿಗೆ ತನ್ನ ಕೂಡ ಕಾಡಿಗೆ ಬರಲು ಅನುಮತಿ ಈಯುತ್ತಾನೆ.

ಪತಿಯಿಂದ ಬೇರೆಯಾಗಿರುವುದನ್ನು ಒಪ್ಪದೆ ಸೀತೆಯು ತಾನೂ ಕಾಡಿಗೆ ಹೋಗುವುದು ರಾಮಾಯಣದ ಕಥೆಯ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾದ ಘಟನೆ. ಅದು ರಾಮನ ಅವತಾರದ ಉದ್ದೇಶಪೂರ್ತಿಗೆ ಕಾರಣವಾಗುತ್ತದೆ. ಆದಿಕಾವ್ಯದ ಅತ್ಯಂತ ಕರುಣಾಜನಕವಾದ ಘಟನೆಗಳೆಲ್ಲವೂ ಅದನ್ನೇ ಅವಲಂಬಿಸಿರುತ್ತವೆ. ಅಷ್ಟೇ ಅಲ್ಲದೆ ಅದರಿಂದ ಭಾರತದೇಶ ಮಾತ್ರವಲ್ಲದೆ ಇಡೀ ಪ್ರಪಂಚದ ಕಾವ್ಯಜಗತ್ತಿನಲ್ಲೇ ರೂಪ, ಗುಣ, ಮತ್ತು ಚರಿತ್ರಗಳ ಸೌಂದರ್ಯದ ದೃಷ್ಟಿಯಿಂದ ಸಮರಿಲ್ಲದ, ಪರಮ ಮಾನ್ಯಳಾದ ಒಬ್ಬ ಮಹಿಳೆಯ ಪಾತ್ರವು ಬರುತ್ತದೆ. ಭಾರತೀಯ ಸಂಸ್ಕೃತಿಯು ನೋಡಿದ ಜೀವನದ ಪರಮಾದರ್ಶಗಳಿಗೆ ಒಳಪಟ್ಟ ಸ್ತ್ರೀ ವ್ಯಕ್ತಿತ್ವವು ಎಷ್ಟರ ಮಟ್ಟಿನ ಆತ್ಮಸೌಂದರ್ಯದಿಂದ ಕೂಡಿರಬಹುದು, ಅವಳ ಆತ್ಮಶಕ್ತಿ ಎಷ್ಟು ದೊಡ್ಡದು ಎಂಬುದಕ್ಕೆ ಸೀತೆಗಿಂತ ಬೇರೆ ಉದಾಹರಣೆ ಇರುವುದಿಲ್ಲ. ಕಾವ್ಯವು ಮುಂದುವರಿದಂತೆ ಅವಳ ಪರಮೋನ್ನತವೂ, ನಿಷ್ಕಳಂಕವೂ, ಆದರ್ಶಮಯವೂ ಆದ ವ್ಯಕ್ತಿತ್ವವು ತನ್ನ ವಿವಿಧ ಸೌಂದರ್ಯಗಳನ್ನು ಹೊರತೋರುತ್ತಾ ಓದುಗರ ಮನಸ್ಸನ್ನು ಸೂರೆ ಮಾಡುತ್ತದೆ. ಸರ್ವಗುಣಪರಿಪೂರ್ಣನಾದ ರಾಮನಲ್ಲಿ ಹುಡುಕಿದರೆ ಒಂದೆರಡು ದೋಷಗಳು ಕಂಡುಬರುತ್ತವೆ. ಅವನ ಒಂದೆರಡು ವ್ಯವಹಾರಗಳು ಇಂದಿಗೂ ಚರ್ಚೆಗೆ ವಿಷಯವಾಗಿವೆ ಆದರೆ ಕೈಯಲ್ಲಿ ದೀಪವನ್ನು ಹಿಡಿದು ಹುಡುಕಿದರೂ ಸೀತೆಯಲ್ಲಿ ಎಲ್ಲಿಯೂ ಯಾವ ದೋಷವೂ ಕಂಡುಬರುವುದಿಲ್ಲ.

ಅಂತಹ ಸ್ತ್ರೀ ಪಾತ್ರವನ್ನು ಸುಂದರವಾಗಿ, ಸಹಜವಾಗಿ, ವಿಸ್ತಾರವಾಗಿ ನಿರೂಪಣೆ ಮಾಡಿರುವುದು ಆದಿಕವಿಯ ಮಹಾಸಾಧನೆ ಎಂದು ಹೇಳಬಹುದು. ಅವರು ಅವಳ ಪಾತ್ರವನ್ನು ಚಿತ್ರಿಸಿರುವ ಪ್ರಸಂಗಗಳೆಲ್ಲವನ್ನೂ ನೆನಸಿಕೊಂಡಾಗ ಅವಳ ವಿಷಯದಲ್ಲಿ ಆಳವಾದ ಗೌರವವು ಉಂಟಾಗದೆ ಇರುವುದಿಲ್ಲ. ವಿಧಿವಿಲಾಸದಿಂದ ಅವಳಿಗೆ ಒದಗುವ ದುಃಖಗಳನ್ನೂ, ಅವುಗಳನ್ನು ಎದುರಿಸುವುದರಲ್ಲಿ ಅವಳು ತೋರಿಸುವ ಧೈರ್ಯವನ್ನೂ ನೆನಸಿಕೊಂಡಾಗ ಆ ಗೌರವವು ನೂರ್ಮಡಿಯಾಗಿ ಅಧಿಕವಾಗುತ್ತದೆ. ಆ ಸಮಯಗಳಲ್ಲಿ ಅಬಲೆಯಾದ ಅವಳಲ್ಲಿ ಮೇರುವನ್ನು ಮೀರಿಸುವ ಮನೋದಾರ್ಢ್ಯವು ತೋರಿಬರುತ್ತದೆ; ಅಸಮಾನವಾದ ಆತ್ಮಬಲವು ಪ್ರಕಟವಾಗುತ್ತದೆ. ನಮ್ಮ ದೇಶದ ಪುರಾತನ ಕಾವ್ಯಗಳಲ್ಲಿ ವರ್ಣಿತರಾಗಿರುವ ಮಹಿಳೆಯರಾರೂ ಅವಳಿಗೆ ಸಾಟಿ

ಯಾಗುವಂತೆ ಕಾಣುವುದಿಲ್ಲ. ರಾಮನು ಗುಣದಿಂದ ಪುರುಷರೆಲ್ಲರನ್ನೂ ಮೀರಿಸುವಂತೆ ಅವಳು ಸ್ತ್ರೀಯರೆಲ್ಲರನ್ನೂ ಮೀರಿಸುತ್ತಾಳೆ.

ಆದುದರಿಂದಲೇ ಬಹಳ ಹಿಂದಿನಿಂದಲೂ ಅವರ ಕಲ್ಯಾಣಗುಣಗಳನ್ನು ನೋಡಿ ಭಾರತೀಯರು ಸೀತಾರಾಮರನ್ನು ಮನುಷ್ಯ ಮಾತ್ರರಾಗಿ ಗಣಿಸದೆ ಸಾಕ್ಷಾತ್ ವಿಷ್ಣು ಮತ್ತು ಲಕ್ಷ್ಮೀ ಎಂದು ಭಾವಿಸಿ ಅವರಿಗೆ ತಮ್ಮ ಗೌರವದ ಪೂಜೆಯನ್ನು ಅರ್ಪಿಸಿರುತ್ತಾರೆ. ಅವರ ಚರಿತ್ರೆಯನ್ನು ಜೀವನದ ಕನ್ನಡಿಯಾಗಿ ಮಾಡಿಕೊಂಡು ಬಾಳಲು ಯತ್ನಿಸಿರುತ್ತಾರೆ.

ಹೀಗೆ ಸೀತೆಯು ಒಂದು ದೃಷ್ಟಿಯಿಂದ ಆರ್ಯಜೀವನದ ಪರಮಾದರ್ಶಗಳನ್ನು ತನ್ನ ಮಾತು, ಕತೆ, ವ್ಯವಹಾರ, ಚರಿತ್ರೆ ಇತ್ಯಾದಿಗಳಿಂದ ಪ್ರತೀಕಿಸುವ ಮಾನ್ಯ ಮಹಿಳೆಯಾಗಿದ್ದರೆ ಮತ್ತೊಂದು ಕಡೆ ಅವಳು ಲೋಕದಲ್ಲಿ ಸ್ತ್ರೀಗೆ ಉಂಟಾಗುವ ದುಃಖದ ಪ್ರತಿನಿಧಿಯಾಗಿ ಕಾಣುತ್ತಾಳೆ. ಪ್ರಾಯಃ ಸೀತೆಯನ್ನು 'ದುಃಖಿತಳಾದ ಸ್ತ್ರೀ' ಎಂದು ಗಣಿಸುವುದು ಅವಳ ಚರಿತ್ರೆಗೆ ಪೂರ್ತಿಯಾಗಿ ಹೊಂದಿಕೊಳ್ಳದಿರಬಹುದು. ಆದರೂ ರಾವಣನ ಅಶೋಕವನದಲ್ಲಿ ಅವಳ ವಾಸ, ರಾಮನಿಂದ ನಿರ್ದೋಷಿಯಾದ ಅವಳಿಗೆ ಉಂಟಾಗುವ ಪರಿಭವ, ಮತ್ತು ಮುಂದೆ ಅವಳ ಪರಿತ್ಯಾಗಗಳು ಅವಳೊಬ್ಬ ದುಃಖಿತಳಾದ ಸ್ತ್ರೀ ಎಂಬ ಅಳಿಸಲಾರದ ಭಾವನೆಯನ್ನು ಮೂಡಿಸಲು ಕಾರಣವಾಗಿರುತ್ತವೆ. ವಿಶೇಷವಾಗಿ ಅವಳ ಪರಿತ್ಯಾಗವು ಒಂದು ಅತ್ಯಂತ ಮರ್ಮಭೇದಕವಾದ ಪ್ರಸಂಗವಾಗಿರುತ್ತದೆ. ಪ್ರಾಚೀನ ಕಾಲದಿಂದ ಕವಿಗಳು ಅದನ್ನು ತೆಗೆದುಕೊಂಡು ಕರುಣರಸಭರಿತವಾದ ಕಾವ್ಯಗಳನ್ನು ಬರೆದಿರುವುದು ಆ ಪ್ರಸಂಗದ ಮಾರ್ಮಿಕತೆಯನ್ನು ಎತ್ತಿಹೇಳುತ್ತದೆ.

ಅದರಿಂದ ಸೀತೆಯ ವ್ಯಕ್ತಿತ್ವದಲ್ಲಿ ಯಾವ ಕುಂದೂ ಉಂಟಾಗುವುದಿಲ್ಲ. ಪ್ರತಿಯಾಗಿ ಅವಳ ವಿಷಯದಲ್ಲಿ ನಮ್ಮ ಗೌರವವು ಅನುತಾಪದೊಡನೆ ಬೆರೆತುಕೊಂಡು ಇನ್ನೂ ಹೆಚ್ಚಿನ ಆಳವನ್ನು ಮುಟ್ಟುತ್ತದೆ. ಅವಳು ನಿರುಪಾಯಳಾಗಿ ಅತ್ಯಂತ ಪ್ರಿಯನಾದ ಪತಿಯಿಂದ ತನ್ನನ್ನು ಬೇರ್ಪಡಿಸುವ ವಿಧಿಯ ವಿಲಾಸಕ್ಕೆ ತನ್ನನ್ನು ಕೊಟ್ಟುಕೊಂಡು ಸಹನೆಯನ್ನೇ ಆಶ್ರಯಿಸುತ್ತಾಳೆ. ಅವಳ ಪತಿಗೌರವವು ಕಡಿಮೆಯಾಗದಿದ್ದರೂ, ಜನಾಪವಾದಕ್ಕೆ ಹೆದರಿ ತನ್ನ ಪರಿಶುದ್ಧತೆಯನ್ನು ತಿಳಿದಿದ್ದರೂ ತನ್ನನ್ನು ಪರಿತ್ಯಾಗ ಮಾಡಿದ ಪತಿಯ ವಿಷಯದಲ್ಲಿ ಅವಳ ಮನಸ್ಸು ಸ್ವಲ್ಪ ಕಾಠಿಣ್ಯ ಭಾವವನ್ನು ತಳೆಯುತ್ತದೆ.

ಅವೆಲ್ಲವೂ ಮುಂದಿನ ವಿಷಯಗಳು. ಕಾಲಗರ್ಭದಲ್ಲಿ ಗೂಢವಾಗಿ ಅಡಗಿರುವಂತಹವು. ತತ್ಕಾಲದಲ್ಲಿ ರಾಮನಿಗಾಗಲಿ, ಸೀತೆಗಾಗಲಿ ಅವುಗಳ ಪರಿವೆಯಿಲ್ಲ. ರಾಮನು ಕಾಡಿಗೆ ಹೋಗುವುದನ್ನು ಸೀತೆಗೆ ಹೇಳಲು ತನ್ನ ಮನೆಗೆ ಬರುತ್ತಾನೆ. ಪ್ರಾಣಕ್ಕಿಂತಲೂ ಪ್ರಿಯೆಯಾದ ಪತ್ನಿಯನ್ನು ಬೀಳ್ಕೊಡುವುದು ಅವನಿಗೆ ಸುಲಭ

ಮಾದುದೇನೂ ಅಲ್ಲ. ಅವನು ಶೋಕದಿಂದ ಸಂತಾಪಗೊಳ್ಳುತ್ತಾನೆ. ಚಿಂತೆಯಿಂದ ಅವನ ಇಂದ್ರಿಯಗಳೆಲ್ಲವೂ ತಳಮಳಗೊಳ್ಳುತ್ತವೆ. ಲಜ್ಜೆಯಿಂದ ಅವನು ಕೆಳಮುಖನಾಗುತ್ತಾನೆ. ಸೀತೆಯನ್ನು ನೋಡಿದ ನಂತರವಂತೂ ಅವನ ಮುಖವು ವಿವರ್ಣವಾಗುತ್ತದೆ. ಅವನು ತನ್ನ ದುಃಖವನ್ನು ತಡೆಯಲು ಅಸಮರ್ಥನಾಗುತ್ತಾನೆ.

ಪಟ್ಟಾಭಿಷಿಕ್ತನಾಗಿ ರಾಜಮರ್ಯಾದೆಗಳೆಲ್ಲದರೊಡನೆ ಪತಿಯ ಆಗಮನವನ್ನು ನಿರೀಕ್ಷಿಸಿದ್ದ ಸೀತೆಗೆ ಅವನ ಅಪೂರ್ವವಾದ ಮುಖವರ್ಣವನ್ನು ನೋಡಿ ಬಹಳ ಭಯವಾಗುತ್ತದೆ. ಆ ಬಗ್ಗೆ ಅವಳು ಅವನನ್ನು ಬಗೆಬಗೆಯಾಗಿ ಪ್ರಶ್ನಿಸುತ್ತಾಳೆ. ರಾಮನು ಅವಳಿಗೆ ಸಂಗ್ರಹವಾಗಿ ನಡೆದ ಸಮಾಚಾರವನ್ನು ತಿಳಿಸಿ ತಾನು ಕಾಡಿಗೆ ಹೋದ ನಂತರ ಅವಳು ಹೇಗೆ ವರ್ತಿಸಿಕೊಳ್ಳಬೇಕೆಂಬುದನ್ನು ತಿಳಿಸುತ್ತಾನೆ. "ಭರತನ ಬಳಿ ಸರ್ವಥಾ ನನ್ನನ್ನು ಹೇಳಬೇಡ. ಅಧಿಕಾರದಲ್ಲಿರುವವರು ಬೇರೆಯವರ ಸ್ತೋತ್ರವನ್ನು ಸಹಿಸರು, ಆದುದರಿಂದ ಭರತನ ಮುಂದೆ ನನ್ನ ಗುಣಗಳನ್ನು ಹೊಗಳಬೇಡ. ನೀನು ಅವನಿಗೆ ಅನುಕೂಲವಾಗಿರು. ವ್ರತೋಪವಾಸಗಳಲ್ಲಿ ನಿರತಳಾಗಿರು. ನನ್ನ ಮಾತಾಪಿತೃಗಳನ್ನು ಗೌರವದಿಂದ ಕಾಣು. ನನ್ನ ಬೇರೆ ಮಾತೆಯರೆಲ್ಲರನ್ನೂ ನೀನು ನಮಸ್ಕರಿಸು. ನನ್ನ ಪ್ರಾಣಗಳಿಗಿಂತ ಪ್ರಿಯರಾದ ಭರತ ಶತ್ರುಘ್ನರನ್ನು ಭ್ರಾತೃ ಮತ್ತು ಪುತ್ರರಂತೆ ನೋಡು ಭರತನಿಗೆ ಯಾವ ಕಾರಣದಿಂದಲೂ ವಿಪ್ರಿಯವನ್ನುಂಟು ಮಾಡಬೇಡ. ಅವನೇ ಈ ದೇಶಕ್ಕೆ ಪ್ರಭು, ರಾಜ. ಅವನನ್ನು ನೀನು ಅನುವರ್ತಿಸಿಕೊಂಡು ಇರು" ಎಂದು ಹೇಳುತ್ತಾನೆ.

ರಾಮನ ಮಾತುಗಳಲ್ಲಿ ಅವನಿಗೆ ಉಚಿತವಾದ ಉತ್ತಮವಾದ ನೀತಿಯು ಇರುವುದನ್ನು ನೋಡುತ್ತೇವೆ. ರಾಜಕಾರಣವನ್ನು ನಿಶ್ಚಯಬುದ್ಧಿಯುಳ್ಳ ಸ್ತ್ರೀಯರು ಎಷ್ಟು ಗಾಢವಾಗಿ ಪ್ರಭಾವಗೊಳಿಸಬಲ್ಲರೆಂಬುದಕ್ಕೆ ರಾಮಾಯಣಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ. ಸೀತೆಯು ರಾಜ್ಯಕ್ಕೆ ಸಹಜವಾಗಿ ಉತ್ತರಾಧಿಕಾರಿಯಾದ, ರಾಜ್ಯವನ್ನು ಕಳೆದುಕೊಂಡ, ಹಿರಿಯ ಮಗನ ಹೆಂಡತಿ. ಅವಳೇನಾದರೂ ಅಯೋಧ್ಯೆಯಲ್ಲಿ ಉಳಿದಿದ್ದರೆ, ಭರತನು ತನ್ನ ಪತಿಗೆ ದೊರಕಬೇಕಾದ ರಾಜ್ಯವನ್ನು ತಂತ್ರದಿಂದ ದೊರಕಿಸಿಕೊಂಡವನೆಂಬ ಭಾವನೆಯು ಅವಳಲ್ಲಿ ಅವಶ್ಯವಾಗಿ ಉಂಟಾಗುತ್ತಿದ್ದಿತು. ಭರತನು ಸಾಮಾನ್ಯರಂತೆ ವರ್ತಿಸಿ ಸಿಂಹಾಸನವನ್ನೇರಿದ್ದರೆ, ಆಗ ಅವನಿಗೂ ಮತ್ತು ಸೀತೆಗೂ ಮಧ್ಯೆ ಅವಶ್ಯವಾಗಿ ಘರ್ಷಣೆಯುಂಟಾಗುತ್ತಿದ್ದಿತು. ಅದರಿಂದ ರಾಜ್ಯದಲ್ಲಿ ಮತ್ತು ರಾಜ ಮನೆತನದಲ್ಲಿ ಯಾವ ವಿಪ್ಲವವು ಬೇಕಾದರೂ ಆಗಬಹುದಾಗಿದ್ದಿತು. ಆದರೆ ಸೀತೆಯು ಅಯೋಧ್ಯೆಯಲ್ಲಿ ಉಳಿಯದೆ ಪತಿಯೊಡನೆ ಕಾಡಿಗೆ ತೆರಳುತ್ತಾಳೆ. ಭರತನು ಸಿಂಹಾಸನವನ್ನೇರದೆ ರಾಮನ ಪಾದುಕೆಗಳನ್ನು ಮುಂದೆ ಇಟ್ಟುಕೊಂಡು ರಾಮನ ಹೆಸರಿನಲ್ಲಿ ರಾಜ್ಯವಾಳುತ್ತಾನೆ. ತತ್ಕಾಲದಲ್ಲಿ ಆ ರೀತಿ ಆಗುವುದೆಂದು ಯೋಚಿಸಲು ರಾಮನಿಗೆ ಆಧಾರವಿಲ್ಲ. ಸೀತೆಯು ಹಿಂದೆ ಉಳಿಯುತ್ತಾಳೆ. ಭರತನು ಸಿಂಹಾಸನವನ್ನೇ

ರುತ್ತಾನೆ ಎಂದು ಭಾವಿಸಿ ರಾಮನು ಆ ಮಾತುಗಳನ್ನು ಹೇಳುತ್ತಾನೆ. ಅವುಗಳಲ್ಲಿ ಶಾಂತಿಯ ಮಾರ್ಗವಿದ್ದು, ಅವು ಅವನ ಧರ್ಮ ಬುದ್ಧಿ ಮತ್ತು ದೂರದರ್ಶಿತ್ವಗಳನ್ನು ಬಯಲಿಗೆ ತರುತ್ತವೆ.

ಆದರೆ ಸೀತೆಯ ಉತ್ತರವು ಅವನ ಊಹೆಗಳೆಲ್ಲವನ್ನೂ ತಪ್ಪಾಗಿಸುತ್ತವೆ. ಅವಳು ಧರ್ಮಜ್ಞೆ. ಪತಿಗೆ ಆದುದು ಪತ್ನಿಗೂ ಎಂದು ನಂಬಿದವಳು. ಆದುದರಿಂದ ರಾಮನ ಮಾತು ಅವಳಿಗೆ 'ಲಘು' ವಾಗಿಯೂ, ತಿರಸ್ಕಾರ ಯೋಗ್ಯವಾಗಿಯೂ ಕಾಣುತ್ತದೆ. ಪತಿಯು ಕಾಡಿಗೆ ಹೋದಾಗ ತಾನು ಹಿಂದೆ ಉಳಿಯುವುದು ಅವಳಿಗೆ ಕಲ್ಪನೆ ಸಹ ಮಾಡಿಕೊಳ್ಳಲಾಗುವುದಿಲ್ಲ. ಅವಳು

ಆರ್ಯಪುತ್ರ ಪಿತಾ ಮಾತಾ ಭ್ರಾತಾ ಪುತ್ರ ಸ್ತಥಾ ಸ್ನುಷಾ ।
ಸ್ವಾನಿ ಪುಣ್ಯಾನಿ ಭುಂಜಾನಾಃ ಸ್ವಂಸ್ವಂಭಾಗ್ಯಮುಪಾಸತೇ ।
ಭರ್ತುರ್ಭಾಗ್ಯಂ ತು ಭಾರ್ಯೈಕಾ ಪ್ರಾಪ್ನೋತಿ ಪುರುಷರ್ಷಭ।
ಅತಶ್ಚೈವಾಹಮಾದಿಷ್ಟಾ ವನೇ ವನೇ ವಸ್ತವ್ಯ ಮಿತ್ಯಪಿ ॥

(ಲೋಕದಲ್ಲಿ ತಂದೆ, ತಾಯಿ, ಸಹೋದರ ಪುತ್ರ ಮತ್ತು ಸೊಸೆಯರು ತಮ್ಮ ತಮ್ಮ ಪುಣ್ಯಗಳನ್ನು ಅನುಭವಿಸುತ್ತಾ, ತಮ್ಮ ತಮ್ಮ ಭಾಗ್ಯವನ್ನು ಪಡೆಯುತ್ತಾರೆ. ಭಾರ್ಯೆಯೊಬ್ಬಳು ಮಾತ್ರ ಭರ್ತನ ಭಾಗ್ಯಕ್ಕೆ ಭಾಗಿಯಾಗುತ್ತಾಳೆ. ಆದುದರಿಂದ (ನಿನ್ನನ್ನು ಕಾಡಿಗೆ ಹೋಗಬೇಕೆಂದು ಹೇಳಿದಾಗ) ನನಗೂ ಕಾಡಿಗೆ ಹೋಗಲು ಹೇಳಿದಂತೆಯೇ ಸರಿ)ಎಂದು ಹೇಳುತ್ತಾಳೆ.

'ನನ್ನನ್ನೂ ನಿನ್ನ ಸಂಗಡ ಕರೆದುಕೊಂಡು ಹೋಗು, ನನ್ನಲ್ಲಿ ಪಾಪವಿಲ್ಲ' 'ಅಗ್ರತಸ್ತೇ ಗಮಿಷ್ಯಾಮಿ ಮೃದ್ನತೀ ಕುಶಕಂಟಕಾನ್' (ನಿನ್ನ ದಾರಿಯಲ್ಲಿರುವ ಮುಳ್ಳುಗಳನ್ನು ಆರಿಸುತ್ತಾ ನಾನು ನಿನ್ನ ಮುಂದೆ ಹೋಗುತ್ತೇನೆ) 'ಇಹ ಪ್ರೇತ್ಯ ಚ ನಾರೀಣಾಂ ಪತಿರೇಕೋ ಗತಿಸ್ಸದಾ' (ಇಹಪರಗಳಲ್ಲಿ ನಾರಿಗೆ ಪತಿಯೊಬ್ಬನೇ ಗತಿ), 'ನಾಸ್ಮಿ ಸಂಪ್ರತಿ ವಕ್ತವ್ಯಾ ವರ್ತಿತವ್ಯಂ ಯಥಾ ಮಯಾ' (ಪತಿಯ ವಿಷಯದಲ್ಲಿ ಹೇಗಿರಬೇಕೆಂಬುದು ನನಗೆ ಮೊದಲೇ ಗೊತ್ತು) ಎಂದು ಬೇಡಿಕೊಳ್ಳುತ್ತಾಳೆ ಕಾಡಿನಲ್ಲಿ ತಾನು ಮಾಡುವ ಸುಖಜೀವನದ ಸುಂದರವಾದ ಚಿತ್ರವನ್ನು ರಾಮನ ಮುಂದೆ ಚಿತ್ರಿಸಿ

ಸಹ ತ್ವಯಾ ವಿಶಾಲಾಕ್ಷ ರಂಸ್ಯೇ ಪರಮನಂದಿನಿ' ।

'ನಾನು ಬಹಳ ಸಂತೋಷದಿಂದ ನಿನ್ನ ಕೂಡ ಕಾಡಿನಲ್ಲಿ ರಮಿಸುತ್ತೇನೆ,' 'ಅನನ್ಯ ಭಾವಳೂ, ಅನುರಕ್ತಚಿತ್ತಳೂ ಆದ ನನ್ನನ್ನು ನಿನ್ನೊಡನೆ ಕಾಡಿಗೆ ಒಯ್ಯು, ನಿನ್ನಿಂದ ಬೇರೆಯಾದರೆ ನಾನು ಸಾವನ್ನಪ್ಪುತ್ತೇನೆ' ಎಂದು ಅವನಿಗೆ ಹೇಳುತ್ತಾಳೆ.

ಆದರೆ ಕಾಡಿನ ಜೀವನದ ಕ್ಲೇಶ ರಾಮನಿಗೆ ಗೊತ್ತು. ಕಣ್ಣಿಗೆ ಕಟ್ಟಿದಂತೆ ವನ ಜೀವನದ ಕಷ್ಟಗಳನ್ನು ಅವನು ಸೀತೆಗೆ ವರ್ಣಿಸುತ್ತಾನೆ. ಕಾಡಿನ ನಿರ್ಜನತೆ, ಅಲ್ಲಿ

ಬಗೆಬಗೆಯಾದ ಮೃಗಗಳಿಂದ ಉಂಟಾಗುವ ಭಯ, ಸರ್ವದಾ ಹಸಿವು ಮತ್ತು ಬಾಯಾರಿಕೆಗಳ ಪೀಡೆ, ಕಾಡಿಗೆ ಹೋದವನಿಗೆ ಉಂಟಾಗುವ ಕಾಯಕ್ಲೇಶ ಇತ್ಯಾದಿಗಳನ್ನು ವಿವರವಾಗಿ ಹೇಳಿ, 'ನೀನು ಕಾಡಿಗೆ ಹೋಗುವುದು ಉಚಿತವಲ್ಲ', 'ಇಲ್ಲಿಯೇ ನೀನು ನಿನ್ನ ಧರ್ಮವನ್ನು ಆಚರಿಸು', 'ಬಹುದೋಷಂ ಹಿ ಕಾಂತಾರಂ' (ವನದ ದೋಷಗಳು ಬಹಳ) ಎಂದು ಅವಳ ಮನಸ್ಸನ್ನು ಹಿಂದಿರುಗಿಸಲು ಪ್ರಯತ್ನಿಸುತ್ತಾನೆ.

ತಾನು ಕೂಡ ಹೋಗುವುದನ್ನು ರಾಮನು ಒಪ್ಪದಿರುವುದನ್ನು ನೋಡಿ ಸೀತೆಯು ಬಹಳ ದುಃಖಿತಳಾಗುತ್ತಾಳೆ. ಅವಳ ಕಣ್ಣುಗಳಿಂದ ನೀರು ಹರಿಯುತ್ತದೆ. ಕಾಡಿಗೆ ಕರೆದುಕೊಂಡು ಹೋಗಲು ಅವನನ್ನು ಬಗೆಬಗೆಯಾಗಿ ಬೇಡಿಕೊಳ್ಳುತ್ತಾಳೆ. ಕರೆದುಕೊಂಡು ಹೋಗದಿರಲು ಅವನು ಕೊಡುವ ಕಾರಣಗಳಿಗೆ ಸಮಾಧಾನ ಹೇಳಿ ಕರೆದುಕೊಂಡು ಹೋಗಲೇಬೇಕೆಂದು ಬಲಾತ್ಕರಿಸುತ್ತಾಳೆ. ಕಾಡಿನಲ್ಲಿ ಆನೆ, ಹುಲಿ ಇತ್ಯಾದಿ ಮೃಗಗಳು ಭೀತಿಯನ್ನುಂಟು ಮಾಡುತ್ತವೆ ಎಂಬ ರಾಮನ ಮಾತಿಗೆ

ಅದೃಷ್ಟಪೂರ್ವರೂಪತ್ವಾತ್ ಸರ್ವೇ ತೇ ತವ ರಾಘವ ।
ರೂಪಂ ದೃಷ್ಟ್ವಾಪ ಸರ್ಪೇಯುಃ ಭಯೇ ಸರ್ವೇಹಿ ಬಿಭ್ಯತಿ॥

(ಹಿಂದೆ ನಿನ್ನ ರೂಪವನ್ನು ನೋಡದಿರುವುದರಿಂದ, ಅವೆಲ್ಲವೂ ನಿನ್ನ ರೂಪವನ್ನು ನೋಡಿ ದೂರ ಹೋಗುತ್ತವೆ. ಭಯವಿರುವಲ್ಲಿ ಎಲ್ಲರೂ ಹೆದರಿಕೊಳ್ಳುತ್ತಾರೆ) ಎಂದು ತ್ತರಿಸುತ್ತಾಳೆ. 'ಪತಿ ಹೀನಳಾದ ನಾರಿಯು ಜೀವಿಸಿರಲಾರಳು'–ಪತಿ ಹೀನಾ ತು ಯಾ ನಾರೀ ನ ಸಾ ಶಕ್ಷ್ಯತಿ ಜೀವಿತುಂ। ಎಂಬ ತನ್ನ ಉಸಿರಿಗೆ ಉಸಿರಾದ ನಂಬಿಕೆಯನ್ನು ಪುನರುಕ್ತಿಸುತ್ತಾಳೆ. ತಂದೆಯ ಮನೆಯಲ್ಲಿ ಬೇರೆ ಬೇರೆ ಭವಿಷ್ಯವಾದಿಗಳಿಂದ ತಾನು ಕಾಡಿಗೆ ಹೋಗಿ ಇರಬೇಕಾಗಿದೆಯೆಂಬ ಭವಿಷ್ಯವನ್ನು ಕೇಳಿದ್ದನ್ನೂ, ಅದರ ದೆಸೆಯಿಂದ ತಾನು 'ವನವಾಸದ ವಿಷಯದಲ್ಲಿ ನಿತ್ಯವೂ ಉತ್ಸಾಹದಿಂದಿರುವುದನ್ನೂ' ಅವನಿಗೆ ಹೇಳಿ, 'ಅವರ ಮಾತು ನಿಜವಾಗಲಿ, ನನ್ನನ್ನು ಕಾಡಿಗೆ ಕರೆದುಕೊಂಡು ಹೋಗು" ಎಂದು ಆಗ್ರಹ ಮಾಡುತ್ತಾಳೆ'

ಶುದ್ಧಾತ್ಮ ಪ್ರೇಮಭಾವಾದ್ಧಿ ಭವಿಷ್ಯಾಮಿ ವಿಕಲ್ಮಷಾ ।
ಭರ್ತಾರಮನುಗಚ್ಛನ್ತೀ ಭರ್ತಾ ಹಿ ಮಮ ದೈವತಂ॥

(ಎಲೆ ಶುದ್ಧಾತ್ಮನೇ, ಪ್ರೇಮಭಾವದಿಂದ ನನ್ನ ಭರ್ತನನ್ನು ಹಿಂಬಾಲಿಸಿ ನಾನು ನನ್ನ ಕಲ್ಮಷಗಳೆಲ್ಲವನ್ನೂ ಕಳೆದುಕೊಳ್ಳುತ್ತೇನೆ. ಭರ್ತನೇ ನನ್ನ ದೇವತೆ) ಎಂದು ಅನನನ್ನು ಅನುನಯ ಮಾಡುತ್ತಾಳೆ. ನೀರೊಡನೆ ನನ್ನನ್ನು ತಂದೆಯು ನಿನಗೆ ಕೊಟ್ಟಿರುತ್ತಾನೆ, ನಾನು ಇಹಪರಗಳಲ್ಲಿ ನಿನ್ನವಳು, ನಿನ್ನ ಸಮಾನ ಸುಖ ದುಃಖಿನೀ,

ನಾಭಿರೋಚಯಸೇ ನೇತುಂ ತ್ವಂ ಮಾಂ ಕೇನೇಹ ಹೇತುನಾ।

ಅಂತಹ ನನ್ನನ್ನು ನೀನು ಕರೆದುಕೊಂಡು ಹೋಗದಿರಲು ಏನು ಕಾರಣ ?) ಎಂದು ಪ್ರಶ್ನಿಸುತ್ತಾಳೆ.

ಆದರೂ ರಾಮನು ಅವಳನ್ನು ಕರೆದುಕೊಂಡು ಹೋಗಲು ಒಪ್ಪುವುದಿಲ್ಲ. ಪ್ರತಿಯಾಗಿ ಅವನು ಅವಳನ್ನು ಸಮಾಧಾನ ಪಡಿಸಲು ಪ್ರಯತ್ನಿಸುತ್ತಾನೆ. ಆಗ ಅವಳು ಬಹಳ ಉದ್ವಿಗ್ನಳಾಗಿ ರಾಮನನ್ನು ಪ್ರೇಮದಿಂದಲೂ ಅಭಿಮಾನದಿಂದಲೂ ತೆಗಳುತ್ತಾಳೆ.

ಕಿಂ ತ್ವಾ ಮನ್ಯತ ವೈದೇಹಃ ಪಿತಾ ಮೇ ಮಿಥಿಲಾಧಿಪಃ ।
ರಾಮ ಜಾಮಾತರಂ ಪ್ರಾಪ್ಯ ಸ್ತ್ರಿಯಂ ಪುರುಷವಿಗ್ರಹಂ ॥

(ನನ್ನ ತಂದೆಯು ಅಳಿಯನಾದ ನಿನ್ನನ್ನು ತಿಳಿಯದೆ ಹೋದನು. ನೀನು ವಾಸ್ತವದಲ್ಲಿ ಪುರುಷರೂಪಿಯಾದ ಸ್ತ್ರೀ) ಲೋಕವು ನಿನ್ನನ್ನು ವೀರನೆಂದು ಹೊಗಳುತ್ತದೆ, ಆದರೆ ನೀನು ಸೂರ್ಯನ ಹಾಗೆ ಬೆಳಗುವಂತೆ ಕಂಡರೂ ನಿನ್ನಲ್ಲಿ ತೇಜಸ್ಸು ಇರುವುದಿಲ್ಲ. ನಿನ್ನನ್ನು ಅನುಸರಿಸುವ ನನ್ನ ವಿಷಯದಲ್ಲಿ ನೀನೇಕೆ ಭಯಗೊಂಡಿರುವೆ? ನಿನ್ನ ವಿಷಾದಕ್ಕೆ ಕಾರಣವೇನು ? ನನ್ನನ್ನು ಸತ್ಯವಂತನನ್ನು ಹಿಂಬಾಲಿಸಿದ ಸಾವಿತ್ರಿಯಂತೆ ತಿಳಿ. ನಾನು ನಿನ್ನನ್ನುಳಿದು ಬೇರೆ ಪುರುಷನನ್ನು ಮನಸ್ಸಿನಿಂದಲೂ ನೋಡೆ. ನೀನು ಯಾರಿಗೆ ಬೇಕಾದರೂ ವಶ್ಯನಾಗಿರು. ಆದರೆ ನನ್ನನ್ನು ಬಿಟ್ಟು ನೀನು ವನಕ್ಕೆ ಹೋಗುವುದು ಉಚಿತವಲ್ಲ ಎಂದು ಹೇಳಿ ತನಗೆ ವನವಾಸದಿಂದ ಯಾವ ಶ್ರಮವೂ ಆಗದೆಂಬುದನ್ನು ಹೃದಯ ಮುಟ್ಟುವಂತೆ ವರ್ಣಿಸುತ್ತಾಳೆ. ನೀನು ಸಂಗಡ ಇದ್ದಾಗ ಕಾಡಿನಲ್ಲಿರುವ ಮುಳ್ಳು ಮುಂತಾದವುಗಳು ನನಗೆ ಹತ್ತಿ, ಜಿಂಕೆಯ ಚರ್ಮಗಳಂತೆ ಮೃದುವಾಗಿರುತ್ತವೆ. ಕಾಡಿನಲ್ಲಿ ಬಿರುಗಾಳಿಯಿಂದ ಏಳುವ ಧೂಳು ಚಂದನದಂತೆ ಇರುತ್ತದೆ. ನಾನು ಹುಲ್ಲಿನ ಮೇಲೆ ಉತ್ತಮವಾದ ಹಾಸಿಗೆಯ ಮೇಲೆ ಹೇಗೋ ಹಾಗೆ ಮಲಗುತ್ತೇನೆ. ನೀನು ನನಗೆ ತಂದುಕೊಡುವ ಫಲಮೂಲಗಳು ಅಮೃತರಸದಂತೆ ಇರುತ್ತವೆ. ನೀನು ನನ್ನನ್ನು ಕರೆದುಕೊಂಡು ಹೋಗದಿದ್ದರೆ ವಿಷ ಕುಡಿದು ಪ್ರಾಣ ಬಿಡುತ್ತೇನೆ. ಆದರೆ ಮಾತ್ರ ನಾನು ಶತ್ರುಗಳ ವಶವಾಗೆ. ನಾನು ನಿನ್ನಿಂದ ವಿರಹವನ್ನು ಕ್ಷಣ ಮಾತ್ರವೂ ಸಹಿಸೆ. ಹಾಗಿರುವಾಗ ಹದಿನಾಲ್ಕು ವರ್ಷಗಳ ವಿಷಯ ಹೇಳುವುದೇನು ? ಎಂದು ಹೇಳಿ ಪತಿಯನ್ನು ಆಲಿಂಗಿಸಿಕೊಂಡು ಶೋಕದಿಂದ ವಿಲಪಿಸುತ್ತಾಳೆ.

ಅವಳ ದುಃಖವನ್ನು ಕವಿಯು ಸುಂದರವಾದ ಉಪಮಾನಗಳಿಂದ ಹೊರಗೆಡಹುತ್ತಾರೆ. "ಅವಳು ಬೇಡರಿಂದ ಹೊಡೆಯಲ್ಪಟ್ಟ ಗಜಾಂಗನೆಯಂತಿದ್ದಳು. ಅರಣಿಯು ಅಗ್ನಿಯನ್ನು ಹೊರಗೆಡಹುವಂತೆ ಬಾಷ್ಪವನ್ನು ಸುರಿಸಿದಳು. ತಾವರೆಗಳಿಂದ ನೀರು ಹರಿಯುವಂತೆ ಅವಳ ಕಣ್ಣುಗಳಿಂದ ನೀರು ಸುರಿಯಿತು. ನೀರಿನಿಂದ ಕಿತ್ತು ಮೇಲೆತ್ತಿದ ಕಮಲದಂತೆ ಅವಳ ವಿಸ್ತಾರವಾದ ಕಣ್ಣುಗಳಿಂದ ಕೂಡಿದ ಮುಖವು ಬಾಡಿತು'' ಎಂದು ಅವರು ಹೇಳುತ್ತಾರೆ.

ಅವಳ ಗಾಢವಾದ ಪ್ರೇಮವನ್ನು ನೋಡಿ ರಾಮನಿಗೂ ಸಹ ವಿಸ್ಮಯವುಂಟಾಗಿರಬೇಕು. ಅವಳ ಮನಸ್ಸನ್ನರಿಯದೆ ಅವಳನ್ನು ಕಾಡಿಗೆ ಕರೆದುಕೊಂಡು ಹೋಗು

ವುದು ಅವನಿಗೆ ಇಷ್ಟವಿರಲಿಲ್ಲ. ಅವಳ ಅಭಿಪ್ರಾಯವನ್ನು ತಿಳಿದ ನಂತರ ಅವನು ಅವಳಿಗೆ

ಸಾ ಹಿ ಸೃಷ್ಟಾನವದ್ಯಾಂಗೀ ವನಾಯ ಮದಿರೇಕ್ಷಣೇ ।
ಅನುಗಚ್ಛಸ್ವ ಮಾಂ ಭೀರು ಸಹ ಧರ್ಮಚರೀ ಭವ ॥
ಸರ್ವಥಾ ಸದೃಶಂ ಸೀತೇ ಮಮ ಸ್ವಸ್ಯ ಕುಲಸ್ಯ ಚ ।
ವ್ಯವಸಾಯ ಮನುಕ್ರಾಂತಾ ಸೀತೇ ತ್ವಮತಿಶೋಭನಂ ॥
ನೇದಾನೀಂ ತ್ವದೃತೇ ಸೀತೇ ಸ್ವರ್ಗಮಪ್ಯಭಿರೋಚಯೇ ।

(ನೀನು ವನವಾಸಕ್ಕೋಸ್ಕರ ಹುಟ್ಟಿರುತ್ತೀಯೆ. ನನ್ನನ್ನು ನೀನು ಹಿಂಬಾಲಿಸು. ಸಹ ಧರ್ಮಚರಿಯಾಗು. ನೀನು ಮಾಡುತ್ತಿರುವುದು ನಿನ್ನ ಮತ್ತು ನನ್ನ ಕುಲಗಳಿಗೆ ಸದೃಶ ವಾಗಿದೆ. ನಿನ್ನ ವ್ಯವಸಾಯವು ಅತಿಶೋಭನವಾದುದು. ಈಗ ನೀನಿಲ್ಲದೆ ನಾನು ಸ್ವರ್ಗ ವನ್ನು ಸಹ ಬಯಸೆ.) ಎಂದು ಅವಳಿಗೆ ಕಾಡಿಗೆ ಬರಲು ಅನುಮತಿ ಈಯುತ್ತಾನೆ.

ಪ್ರಣವ ಘಂಟಾನಾದ

ನಿಖಿಲ ಬ್ರಹ್ಮಾಂಡವನ್ನು ಒಳಗಿನಿಂದಲೂ ಹೊರಗಿನಿಂದಲೂ ವ್ಯಾಪಿಸಿ ಎಲ್ಲೆಲ್ಲೂ ತಾನೇತಾನಾಗಿ ಬೆಳಗಿ ಮೊಳಗುತ್ತಿರುವುದು ಪ್ರಣವನಾದ ಜ್ಯೋತಿ. ಇದೇ ಸಕಲ ವೇದಗಳಿಗೂ ಸಕಲ ರಹಸ್ಯಗಳಿಗೂ ಮೂಲವಾದದ್ದು. ಇದರ ಅರ್ಥವನ್ನು ವಿವರಿಸಲು ಹೊರಟ ಗ್ರಂಥಗಳೇ ಶಾಸ್ತ್ರ, ಸ್ಮೃತಿ, ಇತಿಹಾಸ, ಪುರಾಣ ಗಳು. ಇದರ ಅಭಿವ್ಯಕ್ತಿಯ ವಿದ್ಯೆಯೇ ಕಲೆಯೆನಿಸುವುದು. ಪ್ರಣವದ ನೆಲೆಯಿಂದ ಹೊರಟು ಬೆಳೆಯನ್ನು ಹೊಂದಿರುವ ಭಾರತೀಯ ಸಂಸ್ಕೃತಿಗೆ ಏಕೈಕ ಲಕ್ಷ್ಯ ವೆಂದರೆ ಈ ಪ್ರಣವವೇ.

ಆದರೆ, ಇಲ್ಲಿ ಒಂದು ಪ್ರಶ್ನೆ ಏಳಬಹುದು. ಎಲ್ಲೆಲ್ಲೂ ಬೆಳಗಿ ಮೊಳಗು ತ್ತಿರುವ ಈ ಪ್ರಣವವು ಎಲ್ಲರಿಗೂ ಏಕೆ ಗೋಚರವಾಗುವುದಿಲ್ಲ? ಅದಕ್ಕೆ ಉತ್ತರ ವಿಷ್ಟೆ. ಸೂರ್ಯನ ಬೆಳಕು ಎಲ್ಲೆಡೆಯಲ್ಲೂ ಸಮನಾಗಿ ಹರಡಿದ್ದರೂ ಅಂಧನ ಪಾಲಿಗೆ ಅಂಧಕಾರವೇ. ಮಧುರವಾದ ಗಾನ ನಡೆಯುತ್ತಿದ್ದರೂ ಬಧಿರನ ಪಾಲಿಗೆ ಶೂನ್ಯವೇ. ಪ್ರಯೋಗಾತ್ಮಕ ದೃಷ್ಟಿಯಿಂದ ಉದಾಹರಿಸಿ ಹೇಳುವುದಾದರೆ, ರೇಡಿಯೋ ನಿಲಯದಲ್ಲಿ ಪ್ರಸಾರವಾಗುವ ಸಂಗೀತವು ವಿದ್ಯುತ್ತರಂಗಗಳಾಗಿ ನಭೋ ಮಂಡಲವನ್ನು ವ್ಯಾಪಿಸಿ ವ್ಯಾಪಕ ವ್ಯಾಪ್ತಿಯುಳ್ಳದ್ದಾದರೂ ರೇಡಿಯೋ ಯಂತ್ರದ ಮೂಲಕ ಮಾತ್ರವೇ (ಅದು ಸರಿಯಾಗಿದ್ದಾಗ) ನಮಗೆ ಕೇಳಿಬರುತ್ತದೆ. ಅಂತೆಯೇ

ಈ ಪ್ರಣವದ ಸತ್ಯ ಮತ್ತು ದಿವ್ಯವಾದ ಅನುಭವವು ಯೋಗಿಗಳ ಅಂತರಿಂದ್ರಿಯಕ್ಕೆ ಮಾತ್ರ ಆಗತಕ್ಕದ್ದಾಗಿದೆ.

ಭಾರತೀಯ ಸಮಸ್ತ ಶಾಸ್ತ್ರಗಳಿಗೂ, ವಿದ್ಯೆಗಳಿಗೂ, ಕಲೆಗಳಿಗೂ ಏಕಮಾತ್ರ ಲಕ್ಷ್ಯವು ಈ ಪ್ರಣವವಾಗಿರುವುದರಿಂದ ಪರಮಸಿದ್ಧಾಂತದ ದೃಷ್ಟಿಯಿಂದ ಅವುಗಳಿಗೆ ಪರಸ್ಪರ ಭೇದವಿಲ್ಲ. ಅಷ್ಟೇ ಅಲ್ಲದೆ, ಅವು ಒಂದಕ್ಕೊಂದು ಹಾಸುಹೊಕ್ಕಾಗಿ ಸೇರಿಕೊಂಡಿರುವುದರಿಂದ ಒಂದರಿಂದ ಮತ್ತೊಂದನ್ನು ಬೇರ್ಪಡಿಸಲು ಸಾಧ್ಯವೇ ಇಲ್ಲ. ಇದರಿಂದಲೇ ಅವುಗಳಿಗೆ ಒಂದು ಪೂರ್ಣತೆಯುಂಟಾಗಿರುವುದು.

ಪ್ರಣವದ ಸತ್ಯಸ್ವರೂಪವು ಯೋಗಿಗಳಿಗೆ ಮಾತ್ರ ವೇದ್ಯವಾಗುವುದಾದರೂ ಪ್ರಣವ ಸಾಕ್ಷಾತ್ಕಾರದ ಅಭಿಲಾಷೆಯುಳ್ಳ ಸತ್ಸಾಧಕನನ್ನು ಸಮಸ್ತ ಶಾಸ್ತ್ರಗಳೂ, ವಿದ್ಯೆಗಳೂ, ಕಲೆಗಳೂ ಆ ಪ್ರಣವದ ಕಡೆಗೇ ಕೊಂಡೊಯ್ಯುತ್ತವೆಯೆಂಬುದು ತ್ರಿಕಾಲ ಸತ್ಯವಾದ ವಿಷಯ. ಯಾವ ಶಾಸ್ತ್ರವೇ ಆಗಲಿ, ವಿದ್ಯೆಯಾಗಲಿ, ಕಲೆಯಾಗಲಿ ಪ್ರಣವದ ನೆಲೆಯಿಂದ ಹೊರಟು ಪ್ರಣವದ ನೆಲೆಗೆ ತಲುಪುತ್ತದೆ ಎಂಬುದನ್ನು ಮತ್ತೆ ಮತ್ತೆ ಮನಸ್ಕರಿಸುತ್ತಿರಬೇಕು.

ಉಪನಿಷತ್ತಿನಲ್ಲಿ ಪ್ರಣವದ ಬಗ್ಗೆ ಹೀಗೆ ಹೇಳಿದೆ;– "ಪ್ರತ್ಯಗಾನಂದಂ ಬ್ರಹ್ಮಪುರುಷಂ ಪ್ರಣವಸ್ವರೂಪಮ್। ಅಕಾರ ಉಕಾರ ಮಕಾರ ಇತಿ। ತಾನೇಕಧಾ ಸಮಭರತ್ತದೇತದೋಮಿತಿ।" ಅಕಾರ, ಉಕಾರ, ಮಕಾರಗಳ ಸಂಭರಣೆಯಿಂದ ತ್ರಿಮಾತ್ರಾತ್ಮಕವಾದ ಪ್ರಣವವುಂಟಾಗುತ್ತದೆ. ಇದರ ಶೃಂಗವು ಅರ್ಧಮಾತ್ರಾತ್ಮಕವಾಗಿದೆ. ಅಕಾರ, ಉಕಾರ, ಮಕಾರ, ನಾದ, ಬಿಂದು, ಕಳಾ ಯುಕ್ತವಾದ ಪ್ರಣವವು ಮೋಕ್ಷಕಾರಣವಾಗುತ್ತದೆ.

ಪ್ರಣವ ಮಾತ್ರೆಗಳ ಸಂಭರಣೆಯಿಂದ ಕೂಡಿದ ನಾದವು ಶಾಶ್ವತವಾಗಿ ಮೊಳಗುತ್ತಿರುತ್ತದೆ. ಅನಾಹತವಾಗಿ ಧ್ವನಿತವಾಗುವುದರಿಂದ ಇದಕ್ಕೆ ಅನಾಹತ ನಾದವೆಂದು ಹೆಸರು. ಪ್ರಣವದ ಪ್ರಥಮ ಪರಿಚಯವಾಗುವುದು ಇದರಿಂದಲೇ. ಇದರ ಅಂತಃಸ್ವರೂಪವನ್ನು ಉಪನಿಷತ್ತಿನಲ್ಲಿ ಈ ರೀತಿ ಹೇಳಲಾಗಿದೆ:–

"ಅನಾಹತಸ್ಯ ಶಬ್ದಸ್ಯ ತಸ್ಯಶಬ್ದಸ್ಯಯೋಧ್ವನಿಃ।
ಧ್ವನೇರಂತರ್ಗತಂ ಜ್ಯೋತಿಃ ಜ್ಯೋತಿರಂತರ್ಗತಂ ಮನಃ।
ತನ್ಮನೋವಿಲಯಂ ಯಾತಿ ತದ್ವಿಷ್ಣೋಃ ಪರಮಂ ಪದಮ್॥"

ವಾಕ್ಕು ಪರಾ, ಪಶ್ಯಂತೀ' ಮಧ್ಯಮಾ, ವೈಖರೀ ಎಂಬುದಾಗಿ ನಾಲ್ಕು ಅವಸ್ಥೆಗಳನ್ನು ಹೊಂದಿದೆ. ನಾಲ್ಕನೆಯದಾದ ವೈಖರೀ ರೂಪವು ಮನುಷ್ಯನ ವದನದಿಂದ ವ್ಯಕ್ತವಾಗುತ್ತದೆ. ಧೀಗುಹೆಯಲ್ಲಿ ಅಡಗಿರುವ ಇದರ ಉಳಿದ ಮೂರು

ರೂಪಗಳು ಇಂದ್ರಿಯಗಳಿಗೆ ಗೋಚರವಾಗುವುದಿಲ್ಲ. ಬುದ್ಧಿಗುಹೆಯು ಒಳಹೊಕ್ಕು ಪರೀಕ್ಷಿಸುವ ಋಷಿಗಳ ಅನುಭವಕ್ಕೆ ಮಾತ್ರ ಅವು ಗೊತ್ತಾಗುತ್ತವೆ. ಅಕಾರ ಉಕಾರ, ಮಕಾರಗಳ ವರ್ಣಾತ್ಮಕ ಉಚ್ಚಾರಣೆಯು ಬಿಡಿಬಿಡಿಯಾಗಿ ತೋರುವ ಮೂರು ವರ್ಣಗಳಂತಿದ್ದರೂ ಹಿಂದೆ ಹೇಳಿದ ಸಂಭರಣೆಯಿಂದ ಸಂಹಿತೆಯುಂಟಾಗುವುದರಿಂದ ಸಂಧಿಯಾಗುತ್ತದೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ಅದರ ನೈಜವಾದ ಏಕಾಕಾರನಾದಾವಸ್ಥೆಯು ತೋರುತ್ತದೆ. ಈ ನಾದವೇ ಶ್ರುತಿಯಾಗಿ, ಸ್ವರವಾಗಿ ಮಾರ್ಪಡುವುದರಿಂದ ಸಂಗೀತ ಶಾಸ್ತ್ರದ ಸಪ್ತಸ್ವರಗಳ ಆರೋಹಣಾವರೋಹಣ ಕ್ರಮಗಾನವೆಂದರೆ ಈ ಪ್ರಣವದ ವ್ಯಾಪ್ತಿಯನ್ನು ಗುರುತಿಸಿ ಅನುಭವಿಸುವ ಒಂದು ಮಹಾನಾದಯೋಗ.

ದೇಹವು ನಾಡಿಗಳಿಗೆ ಆಶ್ರಯವಾಗಿದೆ. ನಾಡಿಗಳು ಪ್ರಾಣಕ್ಕೆ ಆಶ್ರಯ. ಪ್ರಾಣವು ಜೀವನಿಗೆ ಆಶ್ರಯ. ಪ್ರಾಣಾರೂಢನಾದ ಚೇತನನು ಬೇರೆಬೇರೆ ನಾಡಿಗಳಲ್ಲಿ ಸಂಚರಿಸುವಾಗ ಭಿನ್ನ ಭಿನ್ನ ಅವಸ್ಥೆಗಳನ್ನು ಹೊಂದುತ್ತಾನೆ. ಬ್ರಹ್ಮನಾಡ್ಯಾರೂಢನಾದರೆ ಈ ಪ್ರಣವಯೋಗವನ್ನವಲಂಬಿಸಿ ತನ್ನ ಸಹಜಾನಂದಾವಸ್ಥೆಯನ್ನು ಹೊಂದುತ್ತಾನೆ. ಸಕಲಯೋಗಗಳ ರಹಸ್ಯವೂ ಇಲ್ಲಿ ಅಡಕವಾಗಿದೆ. ಬ್ರಹ್ಮಮಾರ್ಗಗಾಮಿಯಾದ ಚೇತನನಿಗೆ ಮೇಲೆ ತಿಳಿಸಿದ ಅನಾಹತನಾದವು ಬೇರೆಬೇರೆ ಸ್ಥಾನಗಳಲ್ಲಿ ವಿಧವಿಧವಾಗಿ ಕೇಳಿಬರುತ್ತದೆ. "ಘಂಟಾದುಂದುಭಿಶಂಖಾಬ್ಧಿವೀಣಾವೇಣ್ವಾದಿತಾಲವತ್" ಎಂಬುದಾಗಿ ಘಂಟಾನಾದಕ್ಕೆ ಸದೃಶವಾಗಿ ಈ ಪ್ರಣವ ನಾದವಿರುತ್ತದೆಯೆಂದು ಶ್ರುತಿಯು ಸಾರುತ್ತದೆ. ನಿಖಿಲ ಬ್ರಹ್ಮಾಂಡದ ಉದ್ಗಮವು ಈ ಪ್ರಣವ ನಾದದಿಂದಲೇ ಆಗಿರುವುದರಿಂದ ಪ್ರಕೃತಿಯ ಸಮಸ್ತ ಪದಾರ್ಥಗಳಲ್ಲೂ ಅಡಗಿರುವ ಈ ಪ್ರಣವಶಕ್ತಿಯನ್ನು ಗುರುತಿಸುವ ಸುವಿಧಾನವೇ ಪ್ರಾಚೀನ ಆರ್ಯಮಹರ್ಷಿಗಳು ಪ್ರಚಾರಕ್ಕೆ ತಂದ ಭಾರತೀಯ ಸನಾತನ ಸಂಸ್ಕೃತಿ. ಶಾಸ್ತ್ರೀಯ ವಿಧಾನದಿಂದ ನಿರ್ಮಿತವಾದ ಘಂಟೆ ಮುಂತಾದ ವಾದ್ಯಗಳ ಮಧುರಧ್ವನಿಯು ನಮ್ಮನ್ನು ಹೇಗೆ ಆ ಪರಮಪದದ ಕಡೆಗೆ ಕೊಂಡೊಯ್ಯುತ್ತದೆಯೆಂಬುದನ್ನು ಪ್ರಾಯೋಗಿಕವಾಗಿ ನುಡಿಸಿ ತೋರಿಸಬಹುದು. ಉದಾಹರಣೆಗಾಗಿ, ಭಿನ್ನ ಭಿನ್ನ ಲೋಹಗಳಿಂದ ಮಾಡಿದ ಪಾತ್ರೆಗಳನ್ನೂ, ಸಾಧಾರಣವಾಗಿ ನಾವು ನೋಡಿರುವ ಘಂಟೆಗಳನ್ನೂ, ಶಾಸ್ತ್ರೀಯ ವಿಧಾನದಿಂದ ನಿರ್ಮಿತವಾದ ಘಂಟೆಯನ್ನೂ ಇಟ್ಟುಕೊಂಡು ಅವುಗಳ ಧ್ವನಿಗಳನ್ನು ಪರಿಶೀಲಿಸಿದರೆ ಆ ಧ್ವನಿಗಳಲ್ಲಿ ಪೂರ್ಣಾಪೂರ್ಣತೆಯ ಪರಿಚಯವು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಂತಃಕರಣ ಪರಿಪಾಕವುಳ್ಳವರಿಗೆ ಶಾಸ್ತ್ರೀಯ ವಿಧಾನದಿಂದ ನಿರ್ಮಿತವಾದ ಘಂಟೆಯ ನಾದವು ಕಿವಿಗೆ ಬಿದ್ದೊಡನೆಯೇ ತುರಿಯಾವಸ್ಥೆಗೆ ಕೊಂಡೊಯ್ಯುವುದನ್ನು ಪ್ರಾಯೋಗಿಕವಾಗಿ ಪರೀಕ್ಷಿಸಬಹುದು. ಈ ರೀತಿಯ ಘಂಟೆಯನ್ನು ನಿರ್ಮಿಸಲು ಅದಕ್ಕೆ ಬೇಕಾದ ಲೋಹದ ಪಾಕವನ್ನು ವೈಜ್ಞಾನಿಕವಾಗಿ ತಿಳಿದಿರಬೇಕು. ಲೋಹಪಾಕಕ್ಕೆ ಹಾಕಬೇಕಾದ ವನಸ್ಪತಿರಸವನ್ನು ಪಡೆಯಲು ಅಂತಹ ವನಸ್ಪತಿಯ ಪರಿಚಯವಿರಬೇಕು.

ಪ್ರಣವದ ಸ್ವರೂಪವನ್ನು ತಿಳಿಸುವಾಗ ಸಂಹಿತಾ, ಸಂಧಿಗಳ ವಿಚಾರವನ್ನು ಪ್ರಸ್ತಾಪಿಸಲಾಯಿತು. ತನ್ಮೂಲಕವಾಗಿಯೇ ವ್ಯಾಕರಣ ಶಾಸ್ತ್ರದ ಬೆಳವಣಿಗೆಯಾಗಿರುವುದರಿಂದ ವ್ಯಾಕರಣ ಶಾಸ್ತ್ರಕ್ಕೂ ಪ್ರಣವಕ್ಕೂ ಅವಿಭಾಜ್ಯವಾದ ಸಂಬಂಧವಿದೆಯೆಂಬುದು ತಿಳಿದುಬರುತ್ತದೆ. ಪ್ರಾಣಾರೂಢನಾದ ಜೀವನು ಯಾವ ಯಾವ ನಾಡಿಯಲ್ಲಿ ಸಂಚರಿಸಿದರೆ ಯಾವಯಾವ ಅವಸ್ಥೆಗಳನ್ನು ಹೊಂದುತ್ತಾನೆ ಎಂಬುದನ್ನು ತಿಳಿಯಲು ಶಾರೀರ ವಿಜ್ಞಾನದ ಜೊತೆಗೆ ಶರೀರವಿಜ್ಞಾನವೂ ಬೇಕಾಗಿದೆ. ಆಯುರ್ವೇದ-ಯೋಗಶಾಸ್ತ್ರಗಳ ಲಕ್ಷ್ಯವೇನೆಂಬುದನ್ನು ಈ ಮೂಲಕ ತಿಳಿಯಬೇಕಾಗಿದೆ. ಸಮಸ್ತ ಶಾಸ್ತ್ರಗಳ ಲಕ್ಷ್ಯವು ಒಂದೇ ಶಾಶ್ವತ ತತ್ತ್ವವೆಂಬುದನ್ನು ದಿಗ್ದರ್ಶನ ಮಾಡಲು ಹೀಗೆ ನಿರ್ದೇಶಿಸಲಾಯಿತು. ರಹಸ್ಯವರಿತು ವೈಜ್ಞಾನಿಕವಾಗಿ ಪರಿಶೀಲಿಸಿದರೆ ಸಮಸ್ತ ಶಾಸ್ತ್ರಗಳ ಪರಸ್ಪರ ಸಂಬಂಧವೂ ಅವುಗಳಿಗಿರುವ ಏಕೈಕ ಲಕ್ಷ್ಯವೂ ಏನೆಂಬುದು ಗೊತ್ತಾಗುತ್ತದೆ.

ಈ ಪ್ರಣವೋಪಾಸನೆಯೇ ಪ್ರಾಣಾಯಾಮದ ರಹಸ್ಯ. "ತಸ್ಮಾತ್ ಪ್ರಣವ ಏವ ಪ್ರಾಣಾಯಾಮಃ" ಎಂದು ಉಪನಿಷದ್ವಾಣಿಯು ಮೊಳಗುತ್ತದೆ. ಪ್ರತಿಯೊಬ್ಬ ಜೀವನಲ್ಲಿಯೂ ನಿಃಶ್ವಾಸೋಚ್ಛ್ವಾಸಗಳು ನಡೆಯುವಾಗ ಸ್ವಾಭಾವಿಕವಾಗಿಯೇ ಪ್ರಣವವು ಮೊಳಗುತ್ತಿರುತ್ತದೆ. ನಮ್ಮ ಉಸಿರಾಟವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಇದನ್ನು ಮನಸ್ಸಿಗೆ ತಂದುಕೊಳ್ಳಬಹುದು. ನಾವು ಉಚ್ಛ್ವಾಸವನ್ನು ಮಾಡುವಾಗ ಅಂದರೆ ಉಸಿರನ್ನು ಒಳಗೆ ಎಳೆದುಕೊಳ್ಳುವಾಗ ''ಸೋ'' ಎಂಬ ಧ್ವನಿಯು ಗಮನಕ್ಕೆ ಬರುತ್ತದೆ. ನಿಃಶ್ವಾಸಕಾಲದಲ್ಲಿ ಅಂದರೆ ಉಸಿರನ್ನು ಹೊರಗೆ ಬಿಡುವಾಗ ''ಹಂ'' ಎಂಬ ಧ್ವನಿಯು ಅನುಭವಗೋಚರವಾಗುತ್ತದೆ. ಇವೆರಡೂ ಸೇರಿದರೆ "ಸೋಹಂ" ಎಂದಾಗುತ್ತದೆ. ಊರ್ಧ್ವಸ್ಥಾನದಲ್ಲಿದ್ದ ಜೀವನು ಮೊದಲು ಅಪಾನಶಕ್ತಿಯಿಂದ ಆಕೃಷ್ಟನಾಗುತ್ತಾನೆ. ಮತ್ತೆ ಪ್ರಾಣಶಕ್ತಿಯಿಂದ ಮೇಲಕ್ಕೆ ಎಳೆಯಲ್ಪಡುತ್ತಾನೆ. ಪ್ರಣವಶಕ್ತಿಯು ಅಜ್ಞಾನಿಗಳಲ್ಲಿ ಹೀಗೆ ಹಂಸಃ ಎಂದು ಧ್ವನಿಮಾಡುತ್ತಾ ಪ್ರಾಣಾಪಾನ ರೂಪವಾಗಿ ಆಡುತ್ತಿರುತ್ತದೆ. ಇದನ್ನೇ ಹಂಸಮಂತ್ರ ಜಪವೆಂದೂ ಅಜಪಾಗಾಯತ್ರಿಯೆಂದೂ ಕರೆಯುತ್ತಾರೆ. ಇದು ಜ್ಞಾನಿಗಳಲ್ಲಿ ಊರ್ಧ್ವಮುಖಗತಿ ಪ್ರಧಾನವಾಗಿದ್ದು ಹಂಸೋ ಎಂಬುದು ಆವೃತ್ತವಾಗುತ್ತಾ ಸೋಹಂ ಎಂದು ಮೊಳಗುತ್ತದೆ. ಆದ್ದರಿಂದಲೇ ''ಜ್ಞಾನಿನಾಮೂರ್ಧ್ವಗೋ ಭೂಯಾದಜ್ಞಾನಿನಾಂತ್ವಧೋಮುಖಃ। ಏವಮ್ವೈ ಪ್ರಣವಸ್ತಿಷ್ಠೇತ್ ಯಸ್ತಂವೇದ ಸವೇದವಿತ್" ಎಂದು ಉಪನಿಷತ್ತು ವರ್ಣಿಸುತ್ತವೆ. ಸೋಹಂ ಎನ್ನುವುದರ ಸಕಾರ ಮತ್ತು ಹಕಾರಗಳನ್ನು ತೆಗೆದು "ಓ ಅಂ" ಎಂಬಲ್ಲಿ ಪೂರ್ವರೂಪ ಸಂಧಿಯನ್ನು ಮಾಡಿದರೆ ಓಂ ಎಂದಾಗುತ್ತದೆ. ಇಲ್ಲಿ ಕೇವಲ ಕಾಲ್ಪನಿಕವಾಗಿ ವರ್ಣಗಳನ್ನು ಲೋಪಮಾಡಿ ಸಂಧಿಕಾರ್ಯವನ್ನು ಮಾಡ

ಬೇಕೆಂದು ತಾತ್ಪರ್ಯವಲ್ಲ. ಪ್ರಾಣಾಪಾನಗಳ ಸ್ವರೂಪವನ್ನು ಗಮನಿಸಿ ಅವುಗಳನ್ನು ಹತೋಟಿಗೆ ತಂದುಕೊಂಡು ಅವುಗಳ ಗತಿಯನ್ನು ಸಮಗೊಳಿಸಿ ಬ್ರಹ್ಮನಾಡಿಯಲ್ಲಿ ಹರಿಸಿದಾಗ ಸಂಧಿಕ್ರಿಯೆಯು ಅಂತರಂಗದಲ್ಲಿ ಸಹಜವಾಗಿಯೇ ಉಂಟಾಗುತ್ತದೆ. ಇಂದ್ರಿಯವೃತ್ತಿಗಳಿಂದ ಆಕೃಷ್ಟನಾದ ಜೀವನಿಗೆ ಇದರ ಅರಿವು ಉಂಟಾಗುವುದು ಕಷ್ಟ. ದೈವನಿರ್ಮಿತವಾಗಿ ಯೋಗ–ಭೋಗಾಯತನವಾಗಿರುವ ಈ ದೇಹಯಂತ್ರದ ವ್ಯಾಪಾರವನ್ನು ಅಂತರಂಗ-ಬಹಿರಂಗ ವಿಜ್ಞಾನಗಳಿಂದ ಪರಿಶೀಲಿಸಿದರೆ ಇದರ ಸುಳಿವು ಸಿಕ್ಕುತ್ತದೆ. ಹೀಗೆ ಜೀವನದಲ್ಲಿ ಒಂದು ವಿಧವಾಗಿ ಸ್ವಾಭಾವಿಕವಾಗಿಯೇ ಪ್ರಣವನಾದ ಮೊಳಗುತ್ತಿದೆ. ನಮ್ಮ ಉಸಿರಾಟವು ಸಹಜವಾಗಿ ನಡೆಯುವ ಪ್ರಣವಮಂತ್ರ ಜಪವೇ ಆಗಿದೆ. ಈ ಸಂನಿವೇಶವನ್ನು ಉಪನಿಷತ್ತು ಹೀಗೆ ವರ್ಣಿಸುತ್ತದೆ:–

"ಹಕಾರೇಣ ಬಹಿರ್ಯಾತಿ ಸಕಾರೇಣ ವಿಶೇತ್ ಪುನಃ।
ಹಂಸ ಹಂಸೇತ್ಯಮುಂಮಂತ್ರಂಜೀವೋಜಪತಿ ಸರ್ವದಾ॥
ಷಟ್ ಶತಾನಿ ದಿವಾರಾತ್ರೌ ಸಹಸ್ರಾಣ್ಯೇಕವಿಂಶತಿಃ।
ಏತತ್ಸಂಖ್ಯಾನ್ವಿತಂ ಮಂತ್ರಂ ಜೀವೋಜಪತಿ ಸರ್ವದಾ॥
ಅಜಪಾನಾಮ ಗಾಯತ್ರೀ ಯೋಗಿನಾಂ ಮೋಕ್ಷದಾಸದಾ।
ಅಸ್ಯಾಃ ಸಂಕಲ್ಪ ಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ॥
ಅನಯಾ ಸದೃಶೀ ವಿದ್ಯಾ ಅನಯಾ ಸದೃಶೋಜಪಃ।
ಅನಯಾ ಸದೃಶಂ ಜ್ಞಾನಂ ನಭೂತಂನಭವಿಷ್ಯತಿ॥"

ಈ ಪ್ರಣವ ಮೊಳಗುವಾಗ ಮಂದ್ರ, ಮಧ್ಯ, ತಾರ ಎಂಬ ಮೂರು (ಶ್ರುತಿಯ) ಅವಸ್ಥೆಗಳನ್ನು ಗುರುತಿಸಬೇಕು. ನಾಭಿಯಿಂದ ಹೃದಯದವರೆಗೆ ಮಂದ್ರದ ವ್ಯಾಪ್ತಿಯೂ ಹೃದಯದಿಂದ ಕಂಠದವರೆಗೆ ಮಧ್ಯದ ವ್ಯಾಪ್ತಿಯೂ ಕಂಠದಿಂದ ಮೇಲೆ ಭ್ರೂಮಧ್ಯದವರೆಗೆ ತಾರದ ವ್ಯಾಪ್ತಿಯೂ ಇವೆ. ಭ್ರೂಮಧ್ಯದಿಂದ ಮೇಲೆ ಮೂರ್ಧಸ್ಥಾನದಲ್ಲಿ ಅತಿತಾರವೆಂದು ಹೇಳುತ್ತಾರೆ. ಮೇಲೆ ಹೇಳಿದ ಹಂಸಗಾಯತ್ರೀ ಜಪವು ಮಂದ್ರ, ಮಧ್ಯ, ತಾರಗಳನ್ನು ಒಳಗೊಂಡಿದೆ. ನಾಭಿಸ್ಥಾನವನ್ನು ಒತ್ತಿ ಹಿಡಿದರೆ ಹಂ ಎಂದು ಉಚ್ಚರಿಸಲಾಗುವುದಿಲ್ಲ. ಕಂ ಎಂದು ಬೇಕಾದರೆ ಉಚ್ಚರಿಸಬಹುದು. ಕಂ ಎಂದು ಉಚ್ಚರಿಸಲು ಕಂಠಸ್ಥಾನದ ಸೌಲಭ್ಯಬೇಕು. ಕಂಠವನ್ನು ಒತ್ತಿ ಹಿಡಿದರೆ ಕಂ ಎಂಬುದನ್ನೂ ಉಚ್ಚರಿಸಲು ಆಗುವುದಿಲ್ಲ. ಆದ್ದರಿಂದ ಮಂದ್ರ, ಮಧ್ಯ, ತಾರಗಳಿಂದ ಕೂಡಿದ್ದರೇ ಅಜಪಾಗಾಯತ್ರಿಯ ಪೂರ್ಣತೆ ಅಥವಾ ಪ್ರಣವದ ಪೂರ್ಣತೆಯುಂಟಾಗುವುದು. ಈ ಪ್ರಣವ ಮೊಳಗುವಾಗ ಭೂರಾದಿ ಸಪ್ತವ್ಯಾಹೃತಿಗಳ ಸ್ಥಾನಗಳನ್ನೂ ಗುರುತಿಸಬಹುದು.

ಪ್ರಾಣಾಪಾನ ಸಮಾಯೋಗವೇ ಪ್ರಾಣಾಯಾಮ. ಪ್ರಾಣಾಯಾಮವೇ ಪ್ರಣವವೆಂದು ಹಿಂದೆ ಹೇಳಿದೆ. ಈ ಅನಾಹತನಾದಕ್ಕೆ ಸದೃಶವಾದ ಅನುರಣನದ ಧ್ವನಿಯನ್ನು ಶಾಸ್ತ್ರೀಯ ವಿಧಾನದಿಂದ ನಿರ್ಮಿತವಾದ ಕಂಚಿನ ಘಂಟೆಯ ನಾದ ದಲ್ಲಿ ಕಾಣಬಹುದು. ಇಂತಹ ಘಂಟೆಯ ನಾದದ ಅನುರಣನಕ್ಕೆ ನಮ್ಮ ಮನಸ್ಸನ್ನು ಕೊಟ್ಟರೆ ಮೇಲೆ ಮೇಲೆ ಏರುತ್ತಾ ಮನಸ್ಸು ಒಂದು ಪ್ರಶಾಂತಾವಸ್ಥೆಯನ್ನು ಹೊಂದುತ್ತದೆ. ಆಗ ಸ್ವಾಭಾವಿಕವಾಗಿಯೇ ಪ್ರಾಣನಿರೋಧವಾಗುತ್ತದೆ. ಆ ಘಂಟೆಯ ಅನುರಣನ ಧ್ವನಿಯು ಮೇಲೆ ಹೋಗುತ್ತಾ ನಮ್ಮ ಬಲಗಡೆಯ ಕಿವಿ ಯಲ್ಲಿ ಮಾತ್ರ ಕೊಂಚ ಕಾಲ ಕೇಳಿಸುತ್ತದೆ. ಮತ್ತೆ ಪ್ರಶಾಂತವಾದ ಅವಸ್ಥೆ ಯಲ್ಲಿ ಮನಸ್ಸು ಲಯವಾಗುತ್ತದೆ. ಇಲ್ಲಿರುವ ಅಂತರಂಗ ರಹಸ್ಯವೇನೆಂದರೆ ಪ್ರಾಣರೂಪನಾದ ಚೇತನನ ಗತಿಯು ಪ್ರವೃತ್ತಿಮಾರ್ಗದಲ್ಲಿ ಅಧೋ ಮುಖವಾಗಿಯೂ ನಿವೃತ್ತಿ ಮಾರ್ಗದಲ್ಲಿ (ಅಂದರೆ ತನ್ನ ಸಹಜಾವಸ್ಥೆಯನ್ನು ಸೇರುವಾಗ) ಊರ್ಧ್ವಮುಖವಾಗಿಯೂ ಇರುತ್ತದೆ, ಮನಸ್ಸು ಊರ್ಧ್ವಮುಖ ವಾದ ಪ್ರಾಣಗತಿಯನ್ನು ಆಶ್ರಯಿಸಿ ಅತಿತಾರಾವಸ್ಥೆಯನ್ನು ಹೊಂದಬೇಕು. ಊರ್ಧ್ವ ಗತಿಗೆ ಅನುಕೂಲವಾದ ಬಲಭಾಗದಲ್ಲಿ ಜ್ಞಾನರಜ್ಜುವಿಗೆ ಸೇರಿಕೊಂಡಿರುವ ನಾಡೀ ಪಥವಿದೆ. ಈ ನಾಡೀಮಾರ್ಗಕ್ಕೂ ಬಲಗಿವಿಗೂ ಸಂಬಂಧವಿರುವುದರಿಂದ ಪ್ರಶಾಂತ ವಾದ ಅತಿತಾರಾವಸ್ಥೆಗೆ ಮೊದಲು ಬಲಗಿವಿಯಲ್ಲಿ ಮಾತ್ರ ಆ ನಾದದ ತುದಿಯು ಕೊಂಚ ಹೊತ್ತು ಶ್ರುತವಾಗುತ್ತದೆ. ಹೀಗೆ ಇಡಾ, ಪಿಂಗಳಾ ಮಾರ್ಗಗಳನ್ನು ದಾಟಿ ಬ್ರಹ್ಮನಾಡ್ಯಂತರ್ಗತವಾದ ಕೈವಲ್ಯ ಮಾರ್ಗವನ್ನು ಅವಲಂಬಿಸಬೇಕು. ಘಂಟೆಯ ಅನುರಣನ ಧ್ವನಿಯು ಮೇಲಕ್ಕೆ ಏರಿ ಕೊಂಚಕಾಲ ಬಲಗಿವಿಯಲ್ಲಿ ಮಾತ್ರ ಶ್ರುತವಾಗಿ ಅತಿತಾರಾವಸ್ಥೆಯನ್ನುಂಟು ಮಾಡುತ್ತದೆ. ಅದೇ ದೇವ ಭಾವ. ಆ ದೇವಭಾವಕ್ಕೇರಿ ಸ್ವಯಂ ದೇವನಾಗಿ ದೇವನನ್ನು ಅರ್ಚಿಸಬೇಕು. "ದೇವೋ. ಭೂತ್ವಾದೇವಮರ್ಚಯೇತ್।"

ಪ್ರಣವ ಘಂಟಾನಾದ ವೊಳಗಲಿ!
ದೇವಭಾವದಿ ನಡೆವ ದೇವಪೂಜೆಯಲಿ!!

"ಸ್ತ್ರೀ ಶಿಕ್ಷಣದ ಒಂದು ರೂಪ-ರಂಗವಲ್ಲೀ"

ಸಾಕ್ಷರತೆ ಇಂದಿನ ವಿದ್ಯಾವಂತಿಕೆಯ ಅಳತೆಗೋಲಾಗಿದೆ. ಅಂತೆಯೇ ನಿರಕ್ಷರ ರನ್ನು ಸಾಕ್ಷರರನ್ನಾಗಿ ಮಾಡಲು ವಿಶ್ವಾದ್ಯಂತ ಪ್ರಯತ್ನಗಳು ನಡೆಯುತ್ತಿರುವುದು ಕಂಡುಬರುತ್ತಿದೆ. ವಯಸ್ಕರ ಶಿಕ್ಷಣ, ಕಡ್ಡಾಯ ಶಾಲಾಶಿಕ್ಷಣ, ಹೀಗೆ ಬಗೆಬಗೆಯ

ರೂಪದಲ್ಲಿ ಅಕ್ಷರ ಜ್ಞಾನವನ್ನು ಹರಡಲು ನಮ್ಮ ದೇಶದಲ್ಲಿಯೂ ಪ್ರಯತ್ನ ನಡೆದಿರುವುದು ಎಲ್ಲರಿಗೂ ತಿಳಿದ ಅಂಶವಾಗಿದೆ. ಅಕ್ಷರಸ್ಥರಲ್ಲದವರನ್ನು ಅಜ್ಞಾನಿಗಳೆಂದೂ, ಅನಾಗರಿಕರೆಂದೂ ಭಾವಿಸುವುದು ಎಲ್ಲೆಲ್ಲಿಯೂ ಕಂಡುಬರುತ್ತದೆ.

ಆದರೆ ವಾಸ್ತವಿಕ ದೃಷ್ಟಿಯಿಂದ ಪರಿಶೀಲಿಸಿದಾಗ ಅಕ್ಷರಜ್ಞಾನವಿಲ್ಲದವರನ್ನು ಜೀವನವಿವೇಕರಹಿತರೆಂದು ಭಾವಿಸುವುದು ತಪ್ಪಾಗುತ್ತದೆ, ಗ್ರಾಮೀಣ ಜನರಲ್ಲಿ ಬಾಳಿನಲ್ಲಿಯೂ ಒಂದು ಅಚ್ಚುಕಟ್ಟಿದೆ. ಅವರವರ ವೃತ್ತಿಯ ಬಗೆಗೆ ಗೌರವವಿದೆ. ಜೀವನ ವ್ಯವಹಾರಗಳಲ್ಲಿ ಬೆಳೆದ ವಿವೇಕಪೂರ್ಣವಾದ ಅನೇಕ ಕಟ್ಟುಪಾಡುಗಳಿವೆ. ಇತ್ತೀಚೆಗೆ ಪ್ರಕಟವಾಗುತ್ತಿರುವ ಜನಪದ ಸಾಹಿತ್ಯಗಳೂ, ತತ್ವ್ತದ ಹಾಡುಗಳೂ, ನೀತಿ ಪದ್ಯಗಳೂ, ಗಾದೆ ಮಾತುಗಳು ಅಕ್ಷರಸ್ಥರಾಗದಿದ್ದ ಮಾತ್ರಕ್ಕೆ ಆ ಜನರೇನೂ ಜೀವನ ವಿವೇಕ ಶೂನ್ಯರಲ್ಲ ಎಂಬಂಶಕ್ಕೆ ಸಾಕಷ್ಟು ದಾಖಲೆಯಾಗಿ ನಿಲ್ಲಬಲ್ಲವು.

ಮಹರ್ಷಿಗಳ ದೃಷ್ಟಿಯಲ್ಲಿ ಪ್ರತಿ ಜೀವಿಯ ಜೀವನವೂ ಜೀವನದ ಪರಮಲಕ್ಷ್ಯದತ್ತ ಸಾಗುವಂತೆ ಅಳವಡಿಸಿ ನೆಲೆ ಮುಟ್ಟಿಸುವುದೇ, ದಡಗಂಡು ಪಾರಂಗತನನ್ನಾಗಿಸುವುದೇ, ವಿದ್ಯಾವಂತಿಕೆಯ ಲಕ್ಷಣವಾಗಿತ್ತೇ ಹೊರತು ಕೇವಲ ಓದು ಬರಹದ ಅರಿವಲ್ಲ. 'ಸಾ ವಿದ್ಯಾಯಾ ವಿಮುಕ್ತಯೇ' ಜೀವನದ ಕಟ್ಟುಕಳಚಿ ಜೀವಿಯು ತನ್ನ ನೆಲೆಯರಿತು ಬಾಳಲು ಅನುಗುಣವಾದುದೇ ವಿದ್ಯೆ ಎಂಬುದು ಅವರ ತೀರ್ಮಾನ, ಅಂತೆಯೇ ಅವರ ವಿದ್ಯೆಯ ಫಲ ''ವಿದ್ಯಯಾಮೃತಮಶ್ನುತೇ" ವಿದ್ಯೆಯಿಂದ ಮೃತ್ಯುವನ್ನು ದಾಟಿ ಅಮೃತನಾಗುತ್ತಾನೆ"-ಎಂಬುದೇ ಆಗಿದೆ. ಅಂತೆಯೇ "ಮೃತ್ಯೋರ್ಮಾಮೃತಂ ಗಮಯ 'ಮೃತ್ಯುವಿನಿಂದ ನನ್ನನ್ನು ಅಮೃತತ್ವವನ್ನು ಹೊಂದಿಸು' ಎಂಬುದೇ ನಾಡ ಪ್ರತಿ ಜೀವಿಯ ಪ್ರಾರ್ಥನೆಯೂ ಆಗಿದೆ. ಜೀವನದ ಈ ಲಕ್ಷ್ಯ ಪೂರ್ತಿಕೆಗೆ ಸಾಧನವಾದುದೆಲ್ಲವೂ ಅವರ ದೃಷ್ಟಿಯಿಂದ ವಿದ್ಯಾಭ್ಯಾಸ-ಸಾಕ್ಷರತೆಯೇ ಅವರ ವಿದ್ಯಾಭ್ಯಾಸ ಯೋಜನೆಯ ಸಾರಸರ್ವಸ್ವವಲ್ಲ.

ಸ್ತ್ರೀಯರನ್ನು ಕೀಳಾಗಿ ಕಂಡು ಸ್ತ್ರೀವಿದ್ಯಾಭ್ಯಾಸಕ್ಕೆ ಅವಕಾಶ ನೀಡಲಿಲ್ಲವೆಂಬ ಗುರುತರ ಆಪಾದನೆ ಭಾರತೀಯ ಮಹರ್ಷಿಗಳ ವಿದ್ಯಾಯೋಜನೆಯ ಮೇಲದೆ. ಮೇಲಿನ ಹಿನ್ನೆಲೆಯಿಟ್ಟುಕೊಂಡು ಬಾಳಲಕ್ಷ್ಯ ತಲುಪಲು ಸ್ತ್ರೀಯರಿಗೆ ಬೇಕಾದ ಯೋಜನೆಯನ್ನು ಅವರು ಅಳವಡಿಸಿರಲಿಲ್ಲವೇ ಎಂಬಂಶವನ್ನು ಪರಿಶೀಲಿಸಿದರೆ ಮೇಲಿನ ಆಪಾದನೆ ಹುರುಳಿಲ್ಲದ್ದು ಎಂಬಂಶವು ಸ್ಫುಟವಾಗುತ್ತದೆ.

"ಗೃಹಿಣೀಗೃಹಮುಚ್ಯತೇ'-ಎಂಬುದಾಗಿ ಮನೆಯೊಡತಿಯ ಸ್ಥಾನವನ್ನು ಅವಳಿಗೆ ನೀಡಿದ್ದಾರೆ. ಜೊತೆಗೆ ಬೆಳಗಿನಿಂದ ಸಂಜೆಯುವರೆಗೆ ಅವಳು ನಡೆಸುವ ಗೃಹಕರ್ಮಗಳೆಲ್ಲದರಲ್ಲಿಯೂ ಬಾಳಲಕ್ಷ್ಯದ ನೆನಪನ್ನು ಹೆಜ್ಜೆ ಹೆಜ್ಜೆಗೂ ನೀಡುವ ಮಹಾಯೋಜನೆ ಇರುವುದು ಕಂಡುಬರುತ್ತದೆ. ಮನೆಯಲ್ಲಿ ಜ್ಞಾನದೀಪದ ಪ್ರತಿನಿಧಿಯಾಗಿ

ದೀಪವನ್ನು ಬೆಳಗುವ ಮಹಾಲಕ್ಷ್ಮಿಯಾಕೆ, ಆತ್ಮಭಾವನಕ್ಕೊಪ್ಪುವ ಶುಚಿಯನ್ನು ಕಾಪಾಡುವಾಕೆ, ಷಡ್ರಸಗಳ ಯೋಜನೆಯಿಂದ ವಿವಿಧ ಪ್ರಕೃತಿಗನುಗುಣವಾಗಿ ಪಾಕವನ್ನೇರ್ಪಡಿಸುವುದೂ ಆಕೆಯ ಕಲೆ. ಬಾಳನ್ನು ತಂಪಾಗಿಡುವ ಮಾಧುರ ಗಾನಗಳಿಂದ, ಗೃಹಶೋಭಾಕರಗಳಾದ ರಂಗವಲ್ಲಿಯಿಂದ ಗೃಹವನ್ನು ಅಲಂಕರಿಸುವ ಕಲಾವತಿ ಅವಳು, ಅವಳ ಮಂಗಳಾಭರಣಗಳು, ವಸ್ತ್ರ, ಲಲಾಟತಿಲಕಗಳು, ಈ ಎಲ್ಲದರಲ್ಲಿಯೂ ಅಂತಸ್ಸತ್ವಗಳ ರಹಸ್ಯ ಸೂತ್ರವನ್ನು ಯೋಜಿಸಿ ಲಕ್ಷ್ಮೀಸ್ವರೂಪಿಣಿಯಾಗಿ ಕಂಡು ಗೌರವಿಸಿದವರು ಭಾರತೀಯ ಮಹರ್ಷಿಗಳು.

ಗೃಹಕರ್ಮವಿನಿಯುಕ್ತಳಾದ ಗೃಹಿಣಿಯ ಒಂದೊಂದು ಕರ್ಮದಲ್ಲಿಯೂ ವಿದ್ಯಾಜೀವನದ ಪರಮಲಕ್ಷ್ಯವನ್ನು ಮುಟ್ಟಲು ಬೇಕಾದ ವಿಧಾನವನ್ನು ಜ್ಞಾನಿಗಳು ಅಳವಡಿಸಿರುವುದು ಕಂಡುಬರುತ್ತದೆ. ಪ್ರಕೃತ ಗೃಹಾಲಂಕಾರವಾಗಿಡುವ ರಂಗವಲ್ಲಿಯ ಕಲೆ ಹೇಗೆ ಆ ಯೋಜನೆಯನ್ನೊಳಗೊಂಡಿದೆ ಎಂಬಂಶವನ್ನು ವಿವೇಚಿಸುವುದು ಈ ಸಂಕ್ಷಿಪ್ತ ಬರಹದ ಉದ್ದೇಶವಾಗಿದೆ.

ರಂಗವಲ್ಲಿಯ ವಿನ್ಯಾಸ ಗೃಹಿಣಿಯ ದಿನಚರಿಯ ಅಂಗವಾಗಿದೆ. ಬಾಗಿಲಿನಲ್ಲಿ ರಂಗವಲ್ಲಿಯಿಡದಿದ್ದರೆ ಅಶುಭವೆಂಬ ಭಾವನೆ ಬಹು ವ್ಯಾಪಕವಾಗಿ ಬೆಳೆದಿದೆ. ರಂಗವಲ್ಲಿ ಕೇವಲ ಗೃಹಾಲಂಕಾರದಲ್ಲಿ ಮಾತ್ರವೇ ಅಲ್ಲ, ದೇವತಾರಾಧನೆಯಲ್ಲಿ, ವಿವಾಹ, ಉಪನಯನಾದಿ ಸಂಸ್ಕಾರಗಳಲ್ಲಿ, ವ್ರತೋಪವಾಸಾದಿಗಳಲ್ಲಿ, ಹೀಗೆ ಧಾರ್ಮಿಕ ಜೀವನದ ಪ್ರತಿಹಂತದಲ್ಲಿಯೂ ಗಣ್ಯ ಪಾತ್ರ ವಹಿಸುತ್ತದೆ. ಷಟ್ಕೋಣ, ಅಷ್ಟದಳ ಪದ್ಮ, ಶಂಖ, ಚಕ್ರ, ತ್ರಿಶೂಲಾದಿ ಆಯುಧ ವಿನ್ಯಾಸ, ಷೋಡಶದಲ ಪದ್ಮ, ಬಗೆ ಬಗೆಯ ಬಳ್ಳಿಗಳ ವಿನ್ಯಾಸ, ಸ್ವಸ್ತಿಕ, ಸರ್ವತೋಭದ್ರಾದಿ ಮಂಡಲಗಳು, ಹೀಗೆ ಬಗೆಬಗೆಯ ವಿನ್ಯಾಸಗಳು ರಂಗವಲ್ಲಿಯಲ್ಲಿ ಬಳಕೆಗೆ ಬಂದಿವೆ. ಜೊತೆಗೆ ಬೇರೆಬೇರೆಯಾದ ವಿನ್ಯಾಸಗಳೂ ಉಂಟು. ಒಟ್ಟಿನಲ್ಲಿ ರಂಗವಲ್ಲಿಯ ಪಾತ್ರವಿಲ್ಲದ ವೈದಿಕಕರ್ಮಗಳೇ ಇಲ್ಲವೆಂದರೆ ತಪ್ಪೇನೂ ಆಗದು.

ಈ ಎಲ್ಲ ವಿನ್ಯಾಸಗಳೂ ಆಯಾ ಸಂದರ್ಭಕ್ಕೆ ತಕ್ಕಂತೆ ವಿಶಿಷ್ಟಾರ್ಥಗಳನ್ನೊಳಗೊಂಡಿದ್ದರೂ ಪ್ರತಿದಿನದ ಗೃಹಾಲಂಕಾರ ವಿನ್ಯಾಸವಾದ ಷಟ್ಕೋಣ ವಿನ್ಯಾಸ ಜೀವನದ ರಹಸ್ಯವನ್ನು ಬಿಂಬಿಸುತ್ತದೆಂಬುದನ್ನು ಗಮನಿಸಬಹುದು.

ಸಮಬಾಹು ತ್ರಿಕೋಣಗಳೆರಡು, ಪರಸ್ಪರ ಬಾಹುಗಳನ್ನು ಸಮಾರ್ಧದಲ್ಲಿ ಸಂಧಿಸಿದಾಗ ಷಟ್ಕೋಣ ವಿನ್ಯಾಸವು ಏರ್ಪಡುತ್ತದೆ. ಷಟ್ಕೋಣದ ಮಧ್ಯೆ ಒಂದು ಬಿಂದುವಿರುತ್ತದೆ. ಇದರ ಮೇಲೆ ಪದ್ಮಗಳನ್ನೂ ವಿಸ್ತರಿಸುವುದುಂಟು ಇದು ಸಾಮಾನ್ಯ ಗೃಹಾಲಂಕಾರ.

ಈ ಷಟ್ಕೋಣ ವಿನ್ಯಾಸವು ತನ್ನ ಜೀವನ ಮತ್ತು ಅದರ ಲಕ್ಷ್ಯವನ್ನೂ ಪ್ರತೀಕಿಸುತ್ತದೆ. ತನ್ನ ಜೀವನದ ಪ್ರತಿಬಿಂಬವೇ ಆಗಿದೆ-ಎಂಬಂಶ ಇಂದು ಮರೆಯಾಗಿದೆ. ಜ್ಞಾನಿಗಳು ಒಳಮಾರ್ಗದಲ್ಲಿ ಸಂಚರಿಸುವಾಗ ಅವರ ಎರಡು ಹುಬ್ಬುಗಳ ನಡುವೆ ಕೊಂಚ ಮೇಲ್ಭಾಗದಲ್ಲಿ ಪ್ರಣವರೂಪವಾಗಿ ಗೋಚರವಾಗುವ ಬಿಂದುವೊಂದುಂಟು ಸೃಷ್ಟಿಸಂಕಲ್ಪವನ್ನೊಳಗೊಂಡ ಆ ಬಿಂದು ರೂಪವಾದ ಭಗವಚ್ಛಕ್ತಿಯೂ ತನ್ನನ್ನೇ ವಿಸ್ತರಿಸಿಕೊಳ್ಳಬಯಸಿದಾಗ ಎರಡಾಗುತ್ತದೆ. ಅದೇ ಎರಡು ಬಿಂದು ರೂಪವಾದ ವಿಸರ್ಗ. ಬಿಂದು ಶಿವನ ರೂಪವಾದರೆ ವಿಸರ್ಗವು ಶಕ್ತಿಯ ರೂಪ, ಈಪುರುಷಪ್ರಕೃತಿಗಳು ಸೃಷ್ಟಿಗೆ ಅನುಗುಣವಾಗಿಯೂ ಸೇರಬಹುದು. ಅಂತೆಯೇ ವಿಲೀನಕ್ಕನುಗುಣವಾಗಿಯೂ ಸೇರಬಹುದು, ಶಿವ-ಶಕ್ತಿಯರ ಲಕ್ಷ್ಯಗಾಮಿಯಾದ ನಡೆಯನ್ನು ಮೇಲ್ಕೋಣವುಳ್ಳ ತ್ರಿಕೋಣವೂ, ಅಂತೆಯೇ ಸೃಷ್ಟಿಗೆ ಅನುಗುಣವಾದ ನಡೆಯನ್ನು ಅಧಃಕೋಣತ್ರಿಕೋಣವೂ ಸೂಚಿಸುತ್ತದೆ. ಅಂತೆಯೇ ಈ ಎರಡಕ್ಕೂ ಕಾರಣವಾದುದು ಬಿಂದುವೆಂಬುದನ್ನು ಕೇಂದ್ರದಲ್ಲಿರುವ ಬಿಂದುವು ಸೂಚಿಸುತ್ತದೆ.

ಜ್ಞಾನಿಗಳ ನೋಟಕ್ಕೆ ಸಿಲುಕಿದರೆ ಶಿವ-ಶಿವೆಯರ ವಿಕಾಸ ರೂಪವಾದ ಸೃಷ್ಟಿಯನ್ನು ಸೂಚಿಸುವುದರ ಜೊತೆಗೆ, ಇದರಲ್ಲೇ ಸಿಲುಕಿ ಬೀಳದೇ ಪುರುಷ-ಪ್ರಕೃತಿಗಳ ಸೇರುವೆ ಜೀವನದ ಲಕ್ಷ್ಯ ಸಾಧನೆಗೆ ಅನುಗುಣವಾಗಿರಬೇಕು-ಎಂಬಂಶವನ್ನೂ ಈ ವಿನ್ಯಾಸ ಸ್ಫುಟಪಡಿಸುತ್ತದೆ.ಎಂದರೆ ಪರವನ್ನು ಮರೆಯದ ಇಹದ ಬಾಳಾಟದತ್ತ ಸೂಚನೆ ನೀಡುತ್ತದೆ. ಅಂತೆಯೇ ಜೀವನದ ಶಿವ-ಶಕ್ತಿ ಚತ್ರರೂಪವಾದ ಶ್ರೀಚಕ್ರಾತ್ಮಕವಾಗಿರುವುದು ಜ್ಞಾನಿಗಳ ಅಂತರ್ದೃಷ್ಟಿ ಗೋಚರವಾದ ಸತ್ಯ ಆ ಶ್ರೀ ಚಕ್ರದ ಸಂಕ್ಷಿಪ್ತ ರೂಪವೇ: ಈ ಷಟ್ಕೋಣ ವಿನ್ಯಾಸ.

ಈ ವಿನ್ಯಾಸವನ್ನು ಗೃಹಾಂಗಣದಲ್ಲಿಡುವಾಗ ತನ್ನ ಜೀವನದ ರಹಸ್ಯ ಇಂತಹುದು. ಇದರ ಗುಟ್ಟಿಂತು, ಈ ಧ್ಯೇಯಬದ್ಧವಾಗಿ ಯೋಗ-ಭೋಗಗಳಿಂದ ಸಮೃದ್ಧ ಬಾಳಾಟವನ್ನು ಸೂಚಿಸುವ ಸಂಕೇತವೂ ಇದಾಗಿದೆ. ಅಂತೆಯೇ ಇದು ಕಣ್ಣಿಗೆ ಸೊಗಸುವ ವಿಷಯ ಮಾತ್ರವಲ್ಲದೆ ಅಲಂ-ಕಾರ ಜೀವನಕ್ಕೆ ಇಷ್ಟು ಸಾಕು ಎಂಬಂಶವನ್ನು ಸಾರುವ ವಿಧಾನದಿಂದಲೂ ಅಲಂಕಾರವಾಗಿದೆ. ತನ್ನನ್ನು ತನ್ನ ಬಾಳನ್ನೂ ಬಾಳಲಕ್ಷ್ಯವನ್ನೂ ನೆನಪಿಗೆತಂದುಕೊಟ್ಟು ಅಲಕ್ಷ್ಯದತ್ತ ಸೆಳೆಯುವ ವಿನ್ಯಾಸವುಳ್ಳ ರಂಗವಲ್ಲಿಯು ಕಲೆ ನೆಲೆಮುಟ್ಟಲನುಗುಣವಾದ ಮನೋಧರ್ಮವನ್ನುಂಟುಮಾಡುವ ಕಲೆಯಾಗಿದೆ ಎಂಬುದು ಗಮನಾರ್ಹ. ಈ ವಿನ್ಯಾಸದ ಮೂಲಕ ಬಾಳಮರ್ಮವನ್ನು ಗೃಹಿಣಿಗೆ ತೋರಿಕೊಟ್ಟ ಯೋಜನೆ ಜ್ಞಾನಿಗಳದು, ಅಂತಹ ಮಹರ್ಷಿಗಳಿಗೆ ನಮಿಸಿ ಜ್ಞಾನಿಗಳ ಪರಮಾಂತರಂಗವಾದ ಕಲಾಂತರಂಗವನ್ನು ನನ್ನ ಮನಸ್ಸಿಗೆ ತಂದುಕೊಟ್ಟ ಈ ಬರಹದ ಸ್ಫೂರ್ತಿಕೇಂದ್ರವಾದ ಶ್ರೀರಂಗ ಮಹಾಗುರುವಿಗೆ ಈ ಬರಹವನ್ನರ್ಪಿಸುತ್ತೇನೆ.

ಅಷ್ಟಾಂಗಯೋಗವಿಜ್ಞಾನಮಂದಿರದ ಪ್ರಕಟಣೆಗಳು

೧. ಶ್ರೀರಂಗಮಹಾಗುರು		ಬೆಲೆ ರೂ. ೧೨-೦೦
೨. ನಟರಾಜ (ಇಂಗ್ಲೀಷ್)		ಪ್ರತಿಗಳು ಮುಗಿದಿವೆ.
೩. ಶ್ರೀರಂಗಗೀತಾಮೃತ		ಬೆಲೆ ರೂ. ೨-೦೦
೪. ಶ್ರೀರಂಗವಚನಾಮೃತ		
	ಭಾಗ ೧	ಪ್ರತಿಗಳು ಮುಗಿದಿವೆ
	ಭಾಗ ೨	ಬೆಲೆ ೧-೦೦
	ಭಾಗ ೩	ಬೆಲೆ೧-೦೦

ಆರ್ಯಸಂಸ್ಕೃತಿ ಮಾಸಪತ್ರಿಕೆಯನ್ನು ಪ್ರತಿ ತಿಂಗಳ 5 ಮತ್ತು 6ನೇ ತಾರೀಖುಗಳಲ್ಲಿ ಅಂಚೆಯ ಮೂಲಕ ಗ್ರಾಹಕರಿಗೆ ಕಳುಹಿಸಲಾಗುವುದು. ಸಕಾಲದಲ್ಲಿ ಪತ್ರಿಕೆ ತಲುಪದಿದ್ದಲ್ಲಿ ತಮ್ಮ ಅಂಚೆಕಛೇರಿಯಲ್ಲಿ ವಿಚಾರಿಸಿ ನಮಗೆ ತಿಳಿಸಬೇಕಾಗಿ ಪ್ರಾರ್ಥನೆ. ಹಾಗೆ ತಿಳಿಸುವಾಗ ತಮ್ಮ ಗ್ರಾಹಕಸಂಖ್ಯೆಯನ್ನು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ಆಜೀವ ಚಂದಾಶುಲ್ಕ ಎರಡುನೂರು ರೂಗಳನ್ನು ಐವತ್ತು ರೂಗಳ ನಾಲ್ಕು ಕಂತುಗಳಲ್ಲಿ ಕೊಡಬಹುದು

ಓದುಗರಿಗೆ ಸೂಚನೆ

ಕಳೆದ ತಿಂಗಳ ಸಂಚಿಕೆ (ಮೇ – ವೈಶಾಖ – ದುರ್ಮತಿ) ಯಲ್ಲಿ ಶ್ರೀ ಗುರುವಾಣೀ ಬರಹದ ಪುಟಗಳ ಅಳವಾಡಿಕೆ ವ್ಯತ್ಯಾಸಗೊಂಡಿದೆ. ಓದುಗರು 2, 5, 4, 3 ಈ ಕ್ರಮದಲ್ಲಿ ಓದಿಕೊಳ್ಳಬೇಕಾಗಿ ಪ್ರಾರ್ಥನೆ. ಮುದ್ರಣದಿಂದಾದ ಈ ಅಸೌಕರ್ಯಕ್ಕಾಗಿ ಓದುಗರ ಕ್ಷಮೆ ಕೋರುತ್ತೇವೆ,

---

ಸಂಪಾದಕರು ; ಡಾ|| ಎಸ್. ವಿ. ಚಾಮು

ಪ್ರಕಾಶಕರು ; ಅಷ್ಟಾಂಗಯೋಗವಿಜ್ಞಾನಮಂದಿರಂ
೯೫೭, ಶೇಷಾದ್ರಿ ಅಯ್ಯರ್ ರಸ್ತೆ,
ಲಕ್ಷ್ಮೀಪುರಂ, ಮೈಸೂರು,

ಅಷ್ಟಾಂಗಯೋಗವಿಜ್ಞಾನಮಂದಿರದ ಶಾಖೆಗಳು

೭೨೫, ೪ನೇ ಕ್ರಾಸ್
ಹನುಮಂತನಗರ
ಬೆಂಗಳೂರು-560019

ಶ್ರೀ ಸದ್ಗುರುವಿದ್ಯಾಶಾಲಾ
ಬಸರೀಕಟ್ಟೆ, 577114
ಚಿಕ್ಕಮಗಳೂರು ಜಿಲ್ಲೆ

ಮುದ್ರಕರು : ಶ್ರೀ ನಂದಿಕೇಶ್ವರ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್, ಮೈಸೂರು-೪

[illegible]

Reg. No. KRNN 90

ಆರ್ಯಸಂಸ್ಕೃತಿ

(ಸನಾತನಾರ್ಯಭಾರತೀಯಮಹರ್ಷಿಗಳ ಸಂಸ್ಕೃತಿ ಮತ್ತು ನಾಗರಿಕತೆಗಳ ಒಳತತ್ತ್ವದ ಶೋಧನೆ ಮತ್ತು ಅಧ್ಯಯನಗಳಿಗೆ ಮೀಸಲಾದ ಮಾಸಪತ್ರಿಕೆ)

ಸತ್ಯವು ಭಾರತೀಯಸಂಸ್ಕೃತಿಯ ತಳಹದಿ. ಭಾರತಮಹರ್ಷಿಗಳು ಆ ಸತ್ಯ ಮತ್ತು ಅದರ ವಿಸ್ತಾರವನ್ನು ಒಳದೃಷ್ಟಿಯಿಂದ ಅರಿತು ಅದಕ್ಕನುಗುಣವಾಗಿ ಭಾರತೀಯಸಂಸ್ಕೃತಿ ಮತ್ತು ನಾಗರಿಕತೆಗಳನ್ನು ರೂಪಿಸಿದರು. ಪ್ರತಿ ಜೀವಿಯೂ ಅವನ ಒಳಗೆ ಬೆಳಗುವ ಸತ್ಯವನ್ನು ಮುಟ್ಟಿ ಅದರಿಂದೊದಗುವ ಶಾಂತಿಸೌಖ್ಯಗಳಿಂದ ತುಂಬಿ ಬಾಳುವಂತೆ ಮಾಡುವ ಯೋಜನೆ ಅದರಲ್ಲಿತ್ತು. ಜೀವನ, ಸಮಾಜ ರಾಜನೀತಿ, ವಿದ್ಯೆ, ಕಲೆ, ವೇಷ-ಭೂಷಣ, ಆಚಾರ-ವ್ಯವಹಾರ ಮೊದಲಾದ ಎಲ್ಲ ವ್ಯವಸ್ಥೆಗಳ ಹಿಂಬದಿಯಲ್ಲಿಯೂ ಅವರ ಸತ್ಯದೃಷ್ಟಿಯೇ ಕೆಲಸಮಾಡಿರುವುದನ್ನು ಈ ಬಗ್ಗೆ ಸಂಶೋಧನೆ ನಡೆಸಿದಾಗ ಅರಿಯಬಹುದು.

ಹೀಗೆ ಜೀವಿಗಳನ್ನು ಸತ್ಯದತ್ತ ಸೆಳೆದು, ಶಾಂತಿಸೌಖ್ಯಗಳಿಂದ ಅವರ ಜೀವನವನ್ನು ತುಂಬುವಂತೆ ಮಾಡುತ್ತಿದ್ದ ಸಂಸ್ಕೃತಿಯ ನೈಜರೂಪರೇಖೆಗಳು ಕಾಲ ದೇಶ, ಪ್ರಕೃತಿ ದೋಷಗಳಿಂದ ನಮ್ಮ ಕಣ್ಣಿಗೆ ಮರೆಯಾಗಿ ಅದರ ಫಲ ನಮಗೆ ದೊರೆಯುತ್ತಿಲ್ಲ. ಅಂತಹ ಸಂಸ್ಕೃತಿ ನಾಗರಿಕತೆಗಳನ್ನು ತನ್ನ ಜ್ಞಾನವಿಜ್ಞಾನಬಲದಿಂದ ಅರಿತ ಶ್ರೀರಂಗಮಹಾಗುರುವಿನಿಂದ ವ್ಯವಸ್ಥೆಗೊಂಡ ಅಷ್ಟಾಂಗಯೋಗವಿಜ್ಞಾನಮಂದಿರವು ಈ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದೆ.

ಈ ಪತ್ರಿಕೆಯಲ್ಲಿನ ಬರಹಗಳು ಸನಾತನಾರ್ಯಭಾರತೀಯಸಂಸ್ಕೃತಿಯ ವ್ಯಾಪ್ತಿಗೊಳಪಟ್ಟ ಎಲ್ಲಾ ವಿಷಯಗಳನ್ನೂ ಒಳಗೊಳ್ಳುತ್ತವೆ. ಅವುಗಳ ನೈಜರೂಪ, ಇಂದು ಅವುಗಳಿಗೆ ಒದಗಿರುವ ಸ್ಥಿತಿ, ಮತ್ತು ಅದನ್ನು ಸರಿಯಾಗಿ ಬಳಸಿಕೊಂಡಾಗ ಆಗುವ ಲಾಭ, ಇವುಗಳನ್ನು ಸಕಾರಣವಾಗಿ ವಿವೇಚಿಸುತ್ತವೆ. ಸನಾತನಾರ್ಯಭಾರತೀಯ ಸಂಸ್ಕೃತಿಯ ನೈಜರೂಪವನ್ನು ಬಿಂಬಿಸಲನುಗುಣವಾದ ನಮ್ಮ ಈ ಪ್ರಯತ್ನವನ್ನು ಸಂಸ್ಕೃತಿಪ್ರೇಮಿಗಳು ಪ್ರೋತ್ಸಾಹಿಸುತ್ತಾರೆಂದು ನಂಬಿರುತ್ತೇವೆ.

ಚಂದಾ ವಿವರ

	ಸ್ವದೇಶ	ವಿದೇಶ
ಆಜೀವ	ರೂ. 200–00	US $ 200–00
ಪಂಚವಾರ್ಷಿಕ	ರೂ. 50–00	US $ 50–00
ವಾರ್ಷಿಕ	ರೂ. 10–00	US $ 10–00

ಚಂದಾ ಮೊಬಲಗನ್ನು ಈ ವಿಳಾಸಕ್ಕೆ ಕಳುಹಿಸಬಹುದು.

ಕಾರ್ಯದರ್ಶೀ, ಅಷ್ಟಾಂಗಯೋಗವಿಜ್ಞಾನಮಂದಿರಂ (ರಿ.)
೯೫೭, ಶೇಷಾದ್ರಿ ಅಯ್ಯರ್ ರಸ್ತೆ, ಲಕ್ಷ್ಮೀಪುರಂ, ಮೈಸೂರು-೫೭೦ ೦೦೪